# ಅಧ್ಯಯನ – 3 Study III

# ಪಾಪ ಪರಿಹಾರದ ಮಹಾಯಾಜಕ

## The High Priest of the Atonement

### ತಂದೆಯು ಪಡೆದುಕೊಂಡ ಏಕಮಾತ್ರನು

### The Only Begotten One

**ಆತನು ಯಾರು? ವಾಕ್ಯವು, ಒಬ್ಬ ದೇವರು – ಯೆಹೋವನು ಪಡಕೊಂಡ ಏಕಮಾತ್ರನು – ಸತ್ಯವೇದದ ಪುರಾವೆ – "ಐಶ್ವರ್ಯವಂತನಾಗಿದ್ದವನು" – "ಅಬ್ರಹಾಮನಿಗಿಂತಲೂ ಮೊದಲು ನಾನಿದ್ದೇನು" – ಆದಿಯೂ ಅಂತ್ಯವೂ – ಯೆಹೋವನು ಆದಿಯಲ್ಲಿ ನನ್ನನ್ನು ಪಡೆದುಕೊಂಡಿದ್ದನು – ವಾಕ್ಯವು ಮಾಂಸಧಾರಿಯಾಯಿತು – ಮನುಷ್ಯಾವತಾರವಲ್ಲ – ಆತನು ತನ್ನನ್ನು ತಗ್ಗಿಸಿಕೊಂಡನು – "ಐಶ್ವರ್ಯವಂತನಾಗಿದ್ದವನು ನಮಗಾಗಿ ಬಡವನಾದನು" – ಈ ಸಾಕ್ಷಿಗಳಲ್ಲಿ ಯಾವುದೇ ಕಪಟತನ (ಬೂಟಾಟಿಕೆ) ಇಲ್ಲ – ನಮ್ಮ ಕರ್ತನ ಗುಣನಡತೆಯು ವಂಚನೆಪಡಿಸುವುದಲ್ಲ – ಪರಿಶುದ್ಧನೂ, ನಿರ್ದೋಷಿಯೂ, ನಿಷ್ಕಳಂಕನೂ, ಪಾಪಿಗಳಲ್ಲಿ ಸೇರದೆ ಪ್ರತ್ಯೇಕವಾಗಿರುವಾತನು.**

**"ದೇವರು ಒಬ್ಬನೇ, ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನೇ; ಆತನು ಮನುಷ್ಯನಾಗಿರುವ ಕ್ರಿಸ್ತ ಯೇಸುವೇ; ಆತನು ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು ಒಪ್ಪಿಸಿಕೊಟ್ಟನು. ಇದೇ ತಕ್ಕ ಸಮಯದಲ್ಲಿ ಹೇಳಬೇಕಾದ ಸಾಕ್ಷಿಯು"** – 1 ತಿಮೋಥೆ : 2:5–6.

ನಾವು ಪಾಪನಿವೃತ್ತಿ ಕಾರ್ಯ, ದೇವರೊಂದಿಗಿನ ನಮ್ಮ ಸಂಧಾನ ಮತ್ತು ಅದು ನೆರವೇರಿದ ಪಾಪಪರಿಹಾರ ಯಜ್ಞ ಇವುಗಳ ಮೌಲ್ಯಮಾಪನಮಾಡುವಾಗ ಅದೇ ಅನುಪಾತದಲ್ಲಿ ನಾವು ಪರಲೋಕದ ತಂದೆಯು ಯಾವಾತನನ್ನು ನಮ್ಮ ಪಾಪಗಳ ಪ್ರಾಯಶ್ಚಿತ್ತವಾಗಿ ಮುಂದಿಟ್ಟನೋ ಆತನನ್ನು ಗೌರವದಿಂದ ಕಾಣುತ್ತೇವೆ. ಆತನೇ ನಮ್ಮನ್ನು ಪೂರ್ವಸ್ಥಿತಿಗೆ ತರುವಾತನು ಮತ್ತು ಜೀವದಾಯಕನು. ಹೀಗಿರುವುದರಿಂದ ಯೆಹೋವ ದೇವರು ಇಷ್ಟೊಂದು ಶ್ರೇಷ್ಠಮಟ್ಟದಲ್ಲಿ ಗೌರವ ನೀಡಿದವನು ಯಾರು, ದೇವರಿಂದ ಕೃಪಾಪೂರ್ಣನಾಗಿ ನಮ್ಮ ವಿಮೋಚಕನೂ, ರಕ್ಷಕನೂ ಆಗಿರುವಾತನಾರು ? ಎಂಬ ಪ್ರಶ್ನೆಗೆ ನಾವು ಸಮೀಪಿಸುತ್ತೇವೆ. ಮೊಟ್ಟಮೊದಲಿಗೆ, ಈ ಪ್ರಸ್ತಾಪದ ಬಗ್ಗೆ ನಾವು ನಮ್ಮ ಅಜ್ಞಾನವನ್ನು, ಮತ್ತು ದೇವರ ವಾಕ್ಯವು ನಮಗೆ ಬೋಧಿಸದ ಹೊರತು ಯಾವುದೇ ಒಂದು ತೀರ್ಮಾನಕ್ಕೆ ಬರಲಾಗದ ನಮ್ಮ ಅಸಮರ್ಥತೆಯನ್ನು ಗ್ರಹಿಸಿಕೊಳ್ಳುವುದು ಸೂಕ್ತವೆನಿಸುತ್ತದೆ. ಎರಡನೆಯದಾಗಿ, ನಮ್ಮ ಅನ್ವೇಷಣೆಯ ಪ್ರಾರಂಭದಲ್ಲಿಯೇ ಈ ಮಧ್ಯಸ್ಥಗಾರನ ಶ್ರೇಷ್ಠತೆಯ ಬಗ್ಗೆ ಅಪೋಸ್ತಲನ ಸಾಕ್ಷ್ಯವನ್ನು ಮತ್ತು ಆತನಿಗೆ ಸಲ್ಲಬೇಕಾದ ಗೌರವವನ್ನು ನೆನಪು ಮಾಡಿಕೊಳ್ಳುವುದು ಸಮಂಜಸವಾಗಿದೆ. ಆತನು ಹೇಳುವುದೇನೆಂದರೆ "ದೇವರು ಆತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿ ಎಲ್ಲಾ ಹೆಸರುಗಳಿಗಿಂತ ಶ್ರೇಷ್ಠವಾದ ಹೆಸರನ್ನು ಆತನಿಗೆ ದಯಪಾಲಿಸಿದ್ದಾನೆ. ಆದುದರಿಂದ ಸ್ವರ್ಗ ಮರ್ತ್ಯ, ಪಾತಾಳದಲ್ಲಿರುವವರೆಲ್ಲರೂ ಯೇಸುವಿನ ಹೆಸರಿನಲ್ಲಿ ಅಡ್ಡಬಿದ್ದು ಯೇಸುಕ್ರಿಸ್ತನನ್ನು ಒಡೆಯನೆಂದು ಪ್ರತಿಜ್ಞೆಮಾಡಿ ತಂದೆಯಾದ ದೇವರಿಗೆ ಘನವನ್ನು ಸಲ್ಲಿಸುವರು" ಎಂಬುದಾಗಿ – ಫಿಲಿಪ್ಪಿ. 2:9–10: ಯೋಹಾನ 5:23 ರಲ್ಲಿ ಬರೆದಿದೆ.

ದೇವರ ವಾಕ್ಯವನ್ನು ಜಾಗರೂಕತೆಯಿಂದ ಹುಡುಕುವುದರಿಂದ ಅದು ನಮ್ಮ ಕರ್ತನಾದ ಯೇಸುವಿನ ಬಗ್ಗೆ ಏನನ್ನು ಹೇಳಿದರು ಮತ್ತು ಏನನ್ನು ಹೇಳಲಿಲ್ಲ ಎಂಬುದರ ಬಗ್ಗೆ ನಮಗೆ ಅದರ ಸಾಕ್ಷ್ಯವು ಬಹಳ ಸ್ಪಷ್ಟವಾಗಿ, ಸಾಮರಸ್ಯದಿಂದೊಡಗೂಡಿ ಮತ್ತು ತೃಪ್ತಿಕರವಾಗಿ ಕಂಡುಬರುತ್ತದೆ. ನಾವು ಮೊದಲಿಗೆ ದೇವರ ವಾಕ್ಯದ ಬೋಧನೆಗಳೆಂದು ನಮಗೆ ಕಂಡುಬರುವ ಸಂಗತಿಗಳನ್ನು ಸಾರಾಂಶ ರೂಪದಲ್ಲಿ ನೀಡಿ ನಂತರ ಅವುಗಳನ್ನು ಮುಂದುವರಿಸುತ್ತೇವೆ :

(1) ನಮ್ಮ ಕರ್ತನು ದೇಹಧರಿಸಿಕೊಂಡು ಮಾನವರ ಮಧ್ಯೆ ಜೀವಿಸುವ ಮೊದಲು ಆತ್ಮಸ್ವರೂಪಿಯಾಗಿದ್ದನು.

(2) ಆ ಸಮಯದಲ್ಲಿ, ಮತ್ತು ನಂತರದ ಸಮಯದಲ್ಲಿಯೂ, ಆತನು 'ಒಬ್ಬ ದೇವರು'– ಪರಾಕ್ರಮ ಶಾಲಿ ಎಂಬ ಉಚಿತವಾದ ತಿಳುವಳಿಕೆ ಇತ್ತು. ಆತನು ದೇವರ ನಂತರದ ಒಬ್ಬ ಪ್ರಧಾನದೇವದೂತನಾಗಿದ್ದನು, ಆತನ ಹೆಸರು 'ಮೈಕೇಲ್' ಎಂದಾಗಿತ್ತು. ಇದು 'ದೇವರಂತೆ ಇರುವವನು' ಅಥವಾ 'ದೇವರ ಪ್ರತಿನಿಧಿ'ಎಂಬ ಅರ್ಥವನ್ನು ಸೂಚಿಸುತ್ತದೆ.

(3) ಆತನು ಯೆಹೋವನ ಸೃಷ್ಟಿಯಲ್ಲೆಲ್ಲಾ ಅತ್ಯಂತ ಶ್ರೇಷ್ಠನಾಗಿರುವುದು ಮಾತ್ರವಲ್ಲ, ಆತನು ದೇವರು ಸೃಷ್ಟಿಸಿದ ಆತನ ನೇರವಾದ ಪ್ರಪ್ರಥಮ ಸೃಷ್ಟಿಯೂ, ಏಕಮಾತ್ರನಾಗಿ 'ಪಡೆದಾತನೂ' ಆಗಿದ್ದಾನೆ. ಆತನು ಯೆಹೋವನ ಶಕ್ತಿಯನ್ನು ಪ್ರಯೋಗಿಸಿ, ಆತನ ಪ್ರತಿನಿಧಿಯಾಗಿ ಸಮಸ್ತವನ್ನೂ – ಎಲ್ಲಾ ದೇವದೂತರುಗಳನ್ನೂ,

ಸಂಸ್ಥಾನಗಳನ್ನೂ ಮತ್ತು ಅಧಿಕಾರಗಳನ್ನೂ ಹಾಗೂ ಲೋಕದ ಸಮಸ್ತವನ್ನೂ ಸೃಷ್ಟಿಸಿದನು.

(4) ಆತನು ನಮ್ಮ ವಿಮೋಚಕನಾಗುವಂತೆ 'ದೇಹಧಾರಿ ಯಾದಾಗ' ಅದು ಒತ್ತಾಯಪೂರ್ವಕ ವಾಗಿರಲಿಲ್ಲ, ಅದು ಸ್ವಯಂಇಚ್ಛೆಯಿಂದ ಮತ್ತು ತಂದೆ ದೇವರೊಂದಿಗೆ ಸಂಪೂರ್ಣವಾದ ಸಾಮರಸ್ಯದಿಂದ ಮತ್ತು ದೇವರ ಚಿತ್ತದ ಪ್ರತಿಯೊಂದು ಲಕ್ಷಣಗಳನ್ನು ನೆರವೇರಿಸುವ ಸಂತೋಷಕರವಾದ ಒಪ್ಪಿಗೆಯಿಂದಲೇ ನೆರವೇರಿದ್ದು. ಇದನ್ನು ಆತನು ನ್ಯಾಯದ, ವಿವೇಕದ ಮತ್ತು ಪ್ರೀತಿಯ ಸಾರವಾಗಿ ಗೌರವಿಸಲು ಹಾಗೂ ಪ್ರೀತಿಸಲು ಕಲಿತಿದ್ದನು.

(5) ಆತನ ಮಾನವ ಸ್ಥಿತಿಯ ಅಪಮಾನವು ಶಾಶ್ವತವಾದ ಉದ್ದೇಶದಿಂದ ಕೂಡಿರಲಿಲ್ಲ. ನಮ್ಮ ಕರ್ತನು ಒಬ್ಬ ಮಾನವ ಈಡುಬಲಿಯಾಗಿ ಅಥವಾ 'ಅನುರೂಪವಾದ ಬೆಲೆ'ಯಾಗಿ ತನ್ನನ್ನು ಅರ್ಪಿಸಿ ಒಪ್ಪಿಸಿಕೊಟ್ಟಾಗಲೇ ಅದರ ಉದ್ದೇಶವು ನೆರವೇರಿತು. ಆದುದರಿಂದ ಆತನ ಪುನರುತ್ಥಾನದ ದೇಹವು ಮಾಂಸಿಕ ಶರೀರದಿಂದ ಕೂಡಿರಲಿಲ್ಲ. ಆದರೆ ಅಪೋಸ್ತಲನು ಹೇಳುವಂತೆ **"ಆತನು ಶರೀರ ಸಂಬಂಧದಲ್ಲಿ ಕೊಲ್ಲಲ್ಪಟ್ಟನು. ಆತ್ಮ ಸಂಬಂಧದಲ್ಲಿ ತಿರುಗಿ ಬದುಕುವನಾದನು"** – 1 ಪೇತ್ರ 3:18.

(6) ಆತನ ಪುನರುತ್ಥಾನವು ಆತನಿಗೆ ಆತ್ಮೀಕ ಶರೀರವನ್ನು ಹಿಂತಿರುಗಿಸಿಕೊಟ್ಟದ್ದು ಮಾತ್ರವಲ್ಲ. ಅದರೊಂದಿಗೆ ಆತನ ಮೇಲೆ ಇನ್ನೂ ಉನ್ನತವಾದ ಗೌರವವು ಅನುಗ್ರಹಿಸಲ್ಪಟ್ಟಿತು. ಇದೂ ಆತನ ನಿಷ್ಠೆಗೆ ತಂದೆ ದೇವರ ಬಹುಮಾನವಾಗಿದ್ದು ಆತನನ್ನು ದೈವಿಕ ಸ್ವಭಾವದಲ್ಲಿನ ಪಾಲುದಾರನನ್ನಾಗಿ ಮಾಡಿದನು – ಇದು ಆತ್ಮೀಕ ಸ್ವಭಾವಗಳಲ್ಲಿಯೇ ಅತ್ಯುನ್ನತವಾದುದು*, ಅಮರತ್ವದಿಂದೊಡಗೂಡಿದ್ದು

(7) ಈ ಶ್ರೇಷ್ಠನೇ, ದೇವರಿಂದ ಅತ್ಯುನ್ನತ ಸ್ಥಿತಿಗೆ ಏರಿಸಲ್ಪಟ್ಟವನಾಗಿ ಆತನ ಗೌರವಕ್ಕೆ ಪಾತ್ರನಾದನು. ದೇವರ ವಾಕ್ಯದಲ್ಲಿ, ಕಾರ್ಯದಲ್ಲಿ, ಉದ್ದೇಶದಲ್ಲಿ ಮತ್ತು ಆತ್ಮದಲ್ಲಿ ಆತನು ದೇವರೊಂದಿಗಿರುವಾತನು ಎಂದು ನಾವು ಸಹಾ ಆತನನ್ನು ಗೌರವಿಸುತ್ತೇವೆ, ಆರಾಧಿಸುತ್ತೇವೆ ಮತ್ತು ಆತನ ಸೇವೆಮಾಡುತ್ತೇವೆ.

## ದೇವಕುಮಾರನ ಬಗ್ಗೆ ಪರಿಶುದ್ಧ ಗ್ರಂಥದ ಸಾಕ್ಷ್ಯ
## Scripture Testimony Respecting The Son of God

ನಾವೀಗ ಈ ಸ್ಥಿತಿಗತಿಗಳನ್ನು ಪ್ರಮಾಣೀಕರಿಸುವ ಪರಿಶುದ್ಧಗ್ರಂಥದಲ್ಲಿಯ ಸಾಕ್ಷಿಗಳನ್ನು ಪರಿಗಣಿಸೋಣ. ನಾವು ಯೋಹಾನನ ಸುವಾರ್ತೆಯ ಮೊದಲನೆಯ ಅಧ್ಯಾಯದಿಂದ ಪ್ರಾರಂಭಿಸೋಣ. ಇಲ್ಲಿ ನಮ್ಮ ಕರ್ತನು ಆತನ ಮಾನವಪೂರ್ವ ಉಪಸ್ಥಿತಿಯಲ್ಲಿ **'ವಾಕ್ಯ'**ಎಂಬುದಾಗಿ ಸೂಚಿಸಲ್ಪಟ್ಟಿದ್ದಾನೆ. (ಗ್ರೀಕ್‌ನಲ್ಲಿ ಲೋಗೋಸ್) – **"ಆದಿಯಲ್ಲಿ ವಾಕ್ಯವಿತ್ತು"**. ಡಾ|| ಅಲೆಕ್ಸಾಂಡರ್ ಕ್ಲಾರ್ಕ್ ಎಂಬುವವರು ಈ ವಾಕ್ಯದ ಬಗ್ಗೆ – "ಯೇಸು ಮತ್ತು ಕ್ರಿಸ್ತ ಎಂಬ ಪದಗಳನ್ನು ತರ್ಜುಮೆಗೊಳಿಸದೇ ಇರುವಂತೆ ಕೆಲವು ಕಾರಣಗಳಿಗಾಗಿ **'ಲೋಗೋಸ್'** ಎಂಬ ಈ ಪದವನ್ನು ಸಹಾ ತರ್ಜುಮೆಗೊಳಿಸದೆ ಹಾಗೇ ಬಿಟ್ಟುಬಿಡಬೇಕಾಗಿತ್ತು. ಲೋಕ ರಕ್ಷಕನನ್ನು ಹೆಸರಿಸುವ ಪ್ರತಿಯೊಂದು ಪದವೂ ಆತನ ವ್ಯಕ್ತಿತ್ವದ, ಸ್ವಭಾವದ ಅಥವಾ ಕಾರ್ಯದ, ವಿವರಣೆಯಿಂದೊಡಗೂಡಿರುವಂತೆ **'ಲೋಗೋಸ್'** ಎಂಬ ಸಾರ್ಥಕನಾಮವು **'ವಾಕ್ಯ'**ವನ್ನು, ವಾಗ್ವೈಖರಿಯನ್ನು, ಮಾತನಾಡುವ ಮಾತನ್ನು, ಆತನ ಸಿದ್ಧಾಂತವನ್ನು, ವಿವೇಚನಾ ಸಾಮರ್ಥ್ಯವನ್ನು ಸೂಚಿಸುವುದಾಗಿದೆ" ಎಂದು ಹೇಳಿದ್ದಾರೆ. ಸುವಾರ್ತಿಕನು ತನ್ನ ಪತ್ರಿಕೆಯಲ್ಲಿ, ನಮ್ಮ ಕರ್ತನಿಗೇ ಪುನಃ ಇದೇ ಬಿರುದನ್ನು ಉಪಯೋಗಿಸುತ್ತಾ ಆತನನ್ನು **'ಜೀವ ವಾಕ್ಯ'** ಅಥವಾ ಜೀವದ **'ಲೋಗೋಸ್'** (1 ಯೋಹಾನ 1:1) ಎಂದು ಹೆಸರಿಸುತ್ತಾನೆ.

**'ದೇವರ ವಾಕ್ಯ'** ಅಥವಾ **'ದೇವರ ಲೋಗೋಸ್'** ಎಂಬ ಬಿರುದು ನಮ್ಮ ಒಡೆಯನು ಈ ಲೋಕಕ್ಕೆ ಬರುವ ಮೊದಲು ಆತನ ಮುಖ್ಯ ಕಾರ್ಯವನ್ನು ಅಥವಾ ಉದ್ಯೋಗವನ್ನು ವಿವರಿಸುವ ಒಂದು ಪ್ರಮುಖವಾದ ಹಾಗೂ ಹೆಚ್ಚು ಸೂಕ್ತವಾದ ಪದವಾಗಿದೆ. 'ಲೋಗೋಸ್' ಎಂಬುದು ಸೃಷ್ಟಿಯ ಬಗ್ಗೆ ಪರಲೋಕದ ತಂದೆಯ ನೇರವಾದ ಶಬ್ದಪ್ರಯೋಗವಾಗಿದೆ. ಯಾಕೆಂದರೆ, ದೇವ ಜ್ಞಾನ, ಶಕ್ತಿ ಮತ್ತು ಒಳ್ಳೆಯತನ ಇವುಗಳೆಲ್ಲವೂ ನಂತರದಲ್ಲಿ 'ಲೋಗೋಸ್' ಮೂಲಕ ವ್ಯಕ್ತವಾದವು. ಹಿಂದಿನ ಕಾಲದಲ್ಲಿ ಕೆಲವು ರಾಜರುಗಳು ತಮ್ಮ ಪ್ರಜೆಗಳನ್ನು ಅಧಿಕೃತ ಪ್ರತಿನಿಧಿಗಳ ಮೂಲಕ ಸಂಬೋಧಿಸುತ್ತಿದ್ದರು ಎಂದು ಹೇಳಲಾಗುತ್ತದೆ. ರಾಜನು ಪರದೆಯ ಹಿಂದೆ ಕುಳಿತಿರುತ್ತಿದ್ದನು. ಆತನ 'ವಾಕ್ಯ' ಅಥವಾ ವಕ್ತಾರನು ಪರದೆಯ ಮುಂದುಗಡೆಯಲ್ಲಿ ನಿಂತು, ಜನರಿಗೆ ಕಾಣದಂತೆ ಕುಳಿತಿರುವ ರಾಜನು ವಕ್ತಾರನಿಗೆ ಗುಟ್ಟಾಗಿ ಹೇಳುವ ಸಂಗತಿಗಳನ್ನು ಪ್ರಜೆಗಳಿಗೆ ಘಟ್ಟಿಯಾಗಿ ತಿಳಿಸುತ್ತಿದ್ದನು. ಅಂಥಾಃ ವಕ್ತಾರನಿಗೆ 'ಅರಸನ ಲೋಗೋಸ್' ಎಂದು ಕರೆಯುತ್ತಿದ್ದರು. ಈ ದಂತ ಕತೆಯು ನಿಜವೋ ಅಲ್ಲವೋ, ಇದು ನಮ್ಮ ಕರ್ತನ ಮಾನವ ಪೂರ್ವ ಅಸ್ತಿತ್ವದ ಸಂಬಂಧದಲ್ಲಿ 'ಲೋಗೋಸ್' ಎಂಬ ಪದದ ಉಪಯೋಗವನ್ನು ಚೆನ್ನಾಗಿ ವಿಶದಗೊಳಿಸುತ್ತದೆ. ಆತನು ತಂದೆಯ ಪ್ರತಿನಿಧಿಯಾಗಿ ಆ ಭವ್ಯವಾದ ಸ್ಥಾನವನ್ನು ಹೊಂದಿದ್ದಾನೆ. ಇದನ್ನು ಪರಿಶುದ್ಧ ಗ್ರಂಥದ ಅನೇಕ ಕಡೆಗಳಲ್ಲಿ ಆತನ ಉದ್ಯೋಗಸ್ಥಾನವೆಂದು ಸೂಚಿಸುತ್ತದೆ.

ಅಪೋಸ್ತಲನು ಸ್ಫೂರ್ತಿಗೊಂಡು ಬರೆಯುವಾಗ **"ಆ ವಾಕ್ಯವು** (ಲೋಗೋಸ್ ಒಬ್ಬ) **ದೇವರಾಗಿತ್ತು. ಆ ವಾಕ್ಯವೆಂಬುವವನು** (ಲೋಗೋಸ್) **ಆದಿಯಲ್ಲಿ ದೇವರ**

* ಸಂಪುಟ ಒಂದು, ಅಧ್ಯಾಯ 10 ನೋಡಿರಿ

**ಬಳಿಯಲ್ಲಿದ್ದನು"** (ಯೋಹಾನ 1:2) ಎಂದಿದ್ದಾನೆ. ಇದು ಗ್ರೀಕ್‌ನ ಅಕ್ಷರಶಃವಾದ ಭಾಷಾಂತರವಾಗಿದೆ ಎಂಬುದನ್ನು ಯಾರಿಂದಲಾದರೂ ಆತನು ಗ್ರೀಕ್ ಪಂಡಿತನಾಗಲೀ, ಇಲ್ಲದಿರಲಿ ಆತನಿಂದ ದೃಢಪಡಿಸಿ ಕೊಳ್ಳಬಹುದಾಗಿದೆ. ಗ್ರೀಕ್‌ನಲ್ಲಿ ಮೊದಲನೆಯ ದೇವರು ಎಂಬ ಶಬ್ಧದ ಮುನ್ನ 'ಹೋ' ಎಂಬ ಅಕ್ಷರ ಬರುತ್ತದೆ (Ho God), ಆದರೆ ಎರಡನೆಯದು ಕೇವಲ ದೇವರು (God) ಎಂಬುದಾಗಿದೆ. ಇವು ಉದ್ದೇಶಪೂರ್ವಕಾಗಿ Ho ಇರುವುದನ್ನು ತಂದೆಯಾದ ದೇವರೆಂದೂ, Ho ಇಲ್ಲದಿರುವುದನ್ನು ಮಗನಾದ ದೇವರು ಎಂಬುದಾಗಿಯೂ ಸೂಚಿಸುತ್ತವೆ. ಇದಿಲ್ಲವಾದರೆ ಓದುಗನಿಗೆ ಗೊಂದಲವಾಗುತ್ತದೆ. ಅದೇ ರೀತಿಯಲ್ಲಿ Ho ಎಂಬ ಶಬ್ಧವು ಎರಡನೆಯ ವಚನದಲ್ಲಿರುವ ದೇವರು ಎಂಬ ಪದಕ್ಕೆ ಮೊದಲು ಇರುವುದಾಗಿದೆ, ಆದರೆ ಮೊದಲನೆಯ ವಚನದಲ್ಲಿ ಇಲ್ಲ. ಹೀಗಾಗಿ ಈ ವಚನ ಭಾಗಗಳನ್ನು ಹೀಗೆ ಓದಿಕೊಳ್ಳ ಬೇಕಾಗುತ್ತದೆ :

**"ಆದಿಯಲ್ಲಿ ವಾಕ್ಯ** (ಲೋಗೋಸ್)**ವಿತ್ತು. ಆ ವಾಕ್ಯವು ದೇವರಾಗಿತ್ತು** (Theos). **ಆ ವಾಕ್ಯವೆಂಬುವವನು** (ಲೋಗೋಸ್) **ಆದಿಯಲ್ಲಿ ದೇವರ ಬಳಿಯಲ್ಲಿದ್ದನು** (HoTheos)" – ಯೋಹಾನ 1:1–2.

ಇಲ್ಲಿ ಯಾವ ಆದಿ (Begining)ಯನ್ನು ಪ್ರಸ್ತಾಪಿಸಲಾಗಿದೆ.? ಖಂಡಿತವಾಗಿಯೂ ತಂದೆ ದೇವರಾದ ಯೆಹೋವನ ಅಸ್ತಿತ್ವದ ಆದಿಯನ್ನಲ್ಲ. ಯಾಕೆಂದರೆ, ಆತನು ನಿತ್ಯ ನಿರಂತರ ಇರುವಾತನು ಆತನಿಗೆ ಆದಿಯೆಂಬುದೇ ಇಲ್ಲ (ಕೀರ್ತನೆ 41: 13; 90:2, 106:48 ಇವುಗಳನ್ನು ನೋಡಿರಿ). ಆದರೆ ಯೆಹೋವನ ಕಾರ್ಯಗಳಿಗೆ ಪ್ರಾರಂಭ ಎಂಬುದಿದೆ. ಅದುವೇ 'ಸೃಷ್ಟಿಯ ಆರಂಭ' – ಇದನ್ನೇ ಇಲ್ಲಿ ಪ್ರಸ್ತಾಪಿಸಿರುವುದು. ಈ ವಾಕ್ಯಭಾಗವನ್ನು ಈ ರೀತಿಯಾಗಿ ಅರ್ಥಮಾಡಿಕೊಂಡಾಗ ನಮ್ಮ ಕರ್ತನಾದ ಯೇಸುವು ತನ್ನ ಮಾನವ ಪೂರ್ವದ ಅಸ್ಥಿತ್ವದಲ್ಲಿ ಸೃಷ್ಟಿಯ ಪ್ರಾರಂಭದಲ್ಲಿಯೇ ತನ್ನ ತಂದೆಯಾದ ದೇವರ ಬಳಿಯಲ್ಲಿದ್ದನು. ಇದುವೇ ತಂದೆಯ ಬಳಿಯಲ್ಲಿದ್ದ ವಾಕ್ಯ (ಲೋಗೋಸ್) ಸ್ಪೂರ್ತಿದಾಯದ ಹೇಳಿಕೆಯಾದ ವಾಕ್ಯವು ತಾನೇ "ದೇವರ ಸೃಷ್ಟಿಯ ಆರಂಭ" ಎಂಬ ಹೇಳಿಕೆಯನ್ನು ದೃಢಪಡಿಸುತ್ತದೆ; ಇದುವೇ ಅಪೋಸ್ತಲನ ನಿಖರವಾದ ಹೇಳಿಕೆ. ಇದು ನೀಡುವ ಭರವಸೆ ಏನೆಂದರೆ "ನಮ್ಮ ಕರ್ತನು ಸಭೆಯೆಂಬ ದೇಹದ ಶಿರಸ್ಸು" ಮತ್ತು "ಸತ್ತವರೊಳಗಿಂದ ಮೊದಲಿಗೆ ಎದ್ದು ಬಂದವನು". ಮಾತ್ರವಲ್ಲ, ಆತನು "ದೇವರ ಸೃಷ್ಟಿಗೆ ಮೂಲನು ಆಗಿರುವಾತನು" ಎಂಬುದೇ. ಎಲ್ಲಾ ಸಂಗತಿಗಳಲ್ಲಿ ಆತನಿಗೆ ಪೂರ್ವ ಉತ್ಕೃಷ್ಟತೆ ಇದೆ. ಆತನ ಮಾತುಗಳೇನೆಂದರೆ **"ಆತನು ಅದೃಶ್ಯನಾದ ದೇವರ ಪ್ರತಿರೂಪಿ"– "ಸೃಷ್ಟಿಗೆಲ್ಲಾ ಜ್ಯೇಷ್ಠಪುತ್ರನ ಸ್ಥಾನ ಹೊಂದಿದವನೂ"**. ಯಾಕೆಂದರೆ, ಆತನ ಮೂಲಕವೇ ಭೂಪರಲೋಕಗಳಲ್ಲಿರುವ ದೃಶ್ಯಾದೃಶ್ಯ ವಸ್ತುಗಳೆಲ್ಲವುಗಳೂ ಸೃಷ್ಟಿಗೊಂಡಿವೆ – ಅವುಗಳು ಸಿಂಹಾಸನಗಳಿರಬಹುದು, ಪ್ರಭುತ್ವಗಳಿರಬಹುದು, ಸರ್ಕಾರಗಳಿರಬಹುದು ಅಥವಾ ಯಾವುದೇ ಅಧಿಕಾರಗಳಿರಬಹುದು; ಇವೆಲ್ಲವುಗಳೂ ಆತನಿಂದ ಮತ್ತು ಆತನಿಗಾಗಿ ಸೃಷ್ಟಿಗೊಂಡವು ಮತ್ತು ಆತನು ಇವುಗಳೆಲ್ಲವುಗಳಲ್ಲಿ ಮುಂಚಿತವಾಗಿ ಬರುತ್ತಾನೆ, ಮತ್ತು ಆತನಲ್ಲಿ ಎಲ್ಲಾ ಸಂಗತಿಗಳು ಶಾಶ್ವತವಾಗಿ ಇಡಲ್ಪಟ್ಟಿವೆ (ಕೊಲೊಸ್ಸೆ 1:15–18 ನೋಡಿರಿ). ಇಲ್ಲಿಯೂ ಸಹಾ ಏಕಮಾತ್ರ ಪಡೆದಾತನ ಬಗ್ಗೆ ಪ್ರವಾದನೆಯ ಮಾತುಗಳು, ಆತನು ಈ ಲೋಕದ ರಾಜಾಧಿರಾಜನಾಗಿ ಉನ್ನತಸ್ಥಿತಿಗೆ ಏರುವುದನ್ನು ಪ್ರಕಟಿಸುವುದಲ್ಲದೆ, ಆತನು ಈಗಾಗಲೇ ಯೆಹೋವನ 'ಜೇಷ್ಠ ಪುತ್ರನು' ಎಂದು ವಿವರಿಸುತ್ತವೆ. (ಕೀರ್ತನೆ 89:27 ನೋಡಿರಿ). ನಮ್ಮ ಕರ್ತನು ತನ್ನ ಮೂಲವನ್ನು ಸೂಚಿಸುತ್ತಾ ತನ್ನನ್ನು **"ನಂಬತಕ್ಕ ಸತ್ಯ ಸಾಕ್ಷಿಯೂ ದೇವರ ಸೃಷ್ಟಿಗೆ ಮೂಲನೂ"** (ಪ್ರಕಟನೆ 3:14) ಎಂದು ಹೇಳಿಕೊಳ್ಳುತ್ತಾನೆ.

ಆದಿಯಿಂದಲೂ ಎಲ್ಲಾ ಸೃಷ್ಟಿಗಳಲ್ಲಿಯೂ 'ಜೇಷ್ಠಪುತ್ರ'ನು ಎಂಬ ನಮ್ಮ ಕರ್ತನ ಪೂರ್ವ ಉತ್ಕೃಷ್ಟತೆಯ ಆಲೋಚನೆಗೆ ಸಾಮರಸ್ಯವಾಗಿ, ಮತ್ತು ಆತನೇ 'ಲೋಗೋಸ್' (ವಾಕ್ಯ) ಅಥವಾ ಪರಲೋಕದ ತಂದೆಯ ವಾಕ್ಸರಣಿ ಎಂಬ ಆಲೋಚನೆ ಸಾಮರಸ್ಯವಾಗಿ, ಸುವಾರ್ತಿಕನ ಮುಂದಿನ ಮಾತುಗಳು ದಾಖಲಿಸಲ್ಪಟ್ಟಿವೆ – **"ಆತನ ಮೂಲಕವಾಗಿ ಸಮಸ್ತವೂ ಉಂಟಾಯಿತು; ಉಂಟಾಗಿರುವ ವಸ್ತುಗಳಲ್ಲಿ ಆತನಿಲ್ಲದೆ ಒಂದಾದರೂ ಉಂಟಾಗಲಿಲ್ಲ"** (ಯೊಹಾನ 1:3). ಈ ಮಾತುಗಳು 'ವಾಕ್ಯ' (ಲೋಗೋಸ್)ನಾದ ತಂದೆ ದೇವರ ಏಕೈಕ ಜೇಷ್ಠಪುತ್ರನ ಬಗ್ಗೆ ಎಂಥಾಃ ಭವ್ಯವಾದ ಆಲೋಚನೆಗಳನ್ನು ಹುಟ್ಟಿಸುವುದಲ್ಲವೇ ! ಆತನ ಮೂಲ ಶ್ರೇಷ್ಟತೆಯ ಮತ್ತು ಪೂರ್ವ ಉತ್ಕೃಷ್ಟತೆಯ ಈ ದೃಷ್ಟಿಕೋನದಿಂದ ನಾವು ಅಪೋಸ್ತಲನ ಬೇರೆ ಯಾವುದೇ ಅರ್ಥಸೂಚಿಸುವ ಮಾತುಗಳಿಗಿಂತ ಹೆಚ್ಚಾದ ದೃಷ್ಟಿಕೋನವನ್ನು **"ಆತನು ಐಶ್ವರ್ಯವಂತನಾಗಿದ್ದು ತಾನು ಬಡತನದಲ್ಲಿ ಸೇರುವುದರಿಂದ ನೀವು ಐಶ್ವರ್ಯವಂತರಾಗಬೇಕೆಂದು ನಿಮಗೋಸ್ಕರ ಬಡವನಾದನು"** (2 ಕೊರಿ. 8:9) ಎಂಬ ಮಾತುಗಳಿಂದ ಹೊಂದುತ್ತೇವೆ. ಈ ದೃಷ್ಟಿಕೋನದ ಮೂಲಕ ಆತನು ಎಷ್ಟರ ಮಟ್ಟಿಗೆ ಗೌರವದಲ್ಲಿಯೂ, ಮಹಿಮೆಯಲ್ಲಿಯೂ ಐಶ್ವರ್ಯವಂತನಾಗಿದ್ದಾನೆಂದು ನೋಡುತ್ತೇವೆ. ಈ ಬಗ್ಗೆ ಆತನೇ ತನ್ನ ಪ್ರಾರ್ಥನೆಯಲ್ಲಿ **"ಲೋಕ ಉಂಟಾಗುವುದಕ್ಕೆ ಮುಂಚೆ ನಿನ್ನ ಬಳಿ ನನಗಿದ್ದ ಮಹಿಮೆಯಿಂದಲೇ ನನ್ನನ್ನು ಮಹಿಮೆಪಡಿಸು"** (ಯೊಹಾನ

17:5) ಎಂದಿದ್ದಾನೆ. ದೇವರ ವಿಮೋಚನಾ ಯೋಜನೆಗೆ ಸಂಬಂಧಿಸಿದ ಎಲ್ಲವುಗಳೂ ಆಶ್ಚರ್ಯಕಾರವಾಗಿದ್ದರೂ, ಅವು ದೈವಿಕ ಪ್ರೀತಿಯ, ಮತ್ತು ಪತನಗೊಂಡ ಮಾನವನ ಬಗ್ಗೆ ಕರುಣೆ ಮತ್ತು ಸಹಾನುಭೂತಿಗಳಲ್ಲಿ ತೋರಿಬರುವ ತನ್ನ ನೆರವೇರಿಕೆಯಲ್ಲಿ ದಿಗ್ಭ್ರಮೆಗೊಳಿಸುವುದಾದರೂ, ಈ ದೃಷ್ಟಿಕೋನದಿಂದ ಎಲ್ಲವುಗಳೂ ಸಮಂಜಸವಾಗಿವೆ – ದೇವರ ಗುಣಲಕ್ಷಣಗಳು ಮತ್ತು ಹೇಳಿಕೆಗಳಿಗನು ಗುಣವಾಗಿವೆ.

ನಮ್ಮ ಕರ್ತನಾದ ಯೇಸುವಿಗೆ ಆತನು ಬೆತ್ಲೆಹೇಮಿನಲ್ಲಿ ಜನಿಸುವವರೆಗೆ ಯಾವುದೇ ಅಸ್ಥಿತ್ವವಿದ್ದಿಲ್ಲ ಎಂದು ಹೇಳುವವರಿಗೆ ಮಾನವರಿಗಾಗಿ ದೇವರ ನೆರವಿನ ಯೋಜನೆಯ ಬಗ್ಗೆ ಕೀಳಾದ ದೃಷ್ಟಿಕೋನವಿದೆ; ಮತ್ತು ಅವರು ಮೇಲೆ ಹೇಳಿದ ಮತ್ತು ಲೋಕವು ಉಂಟಾಗುವುದಕ್ಕೆ ಮುಂಚೆಯೇ ತಂದೆಯೊಡನೆ ನಮ್ಮ ಕರ್ತನಿಗಿದ್ದ ಮಹಿಮೆಯ ಬಗ್ಗೆ ಮತ್ತು ಆತನು ತನ್ನನ್ನು ತಗ್ಗಿಸಿಕೊಂಡು, ದೇವದೂತರಿಗಿಂತ ಕಡಿಮೆಯಾದ ಸ್ವಭಾವವನ್ನು ಧರಿಸಿಕೊಂಡು ದೇವದೂತರುಗಳಿಗಿಂತ ಹೆಚ್ಚಾದ ಸ್ವಭಾವವನ್ನು ಬಿಟ್ಟುಕೊಟ್ಟ ಬಗ್ಗೆ ಇರುವ ಇತರ ಅನೇಕ ದೇವರವಾಕ್ಯಗಳ ಪ್ರಯೋಜನವನ್ನು ಪಡಕೊಳ್ಳುವುದಿಲ್ಲ. ಅವರು ದೇವರ ಕುಮಾರನನ್ನು ಗೌರವಿಸುವ ಪ್ರಯತ್ನದಲ್ಲಿ ಅವರು ದೇವರ ಮಾತುಗಳನ್ನು ಮೀರಿಹೋಗಿದ್ದಾರೆ ಮತ್ತು ಆತನು ದೇವರ ಮಗನು, ಆತನ ಸಂತಾನ ಮತ್ತು ದೇವರು ಮಗನಿಗಿಂತ ದೊಡ್ಡವನು ಎಂಬ ದೇವರ ವಾಕ್ಯದ ಮತ್ತು ಅಪೋಸ್ತಲರ ಹೇಳಿಕೆಯನ್ನು ಅಗೌರವಿಸಿದ್ದಾರೆ. ಇಂಥಾಃ ತಪ್ಪು ದೃಷ್ಟಿಕೋನವು ಅದರ ಮಿಲಿಯಾಂತರ ಅನುಯಾಯಿಗಳನ್ನು ಪ್ರತಿಯೊಂದು ದಿಕ್ಕಿನಲ್ಲಿಯೂ ಬಿಡಿಸಲಾಗದ ತೊಂದರೆಗಳಿಗೆ ತುತ್ತಾಗಿಸುತ್ತದೆ. ಮತ್ತೂ ಈ ರೀತಿಯ ವಿವೇಚನಾರಹಿತವಾದ ತಪ್ಪು ವಿಚಾರ ಸರಣಿಗಳಿಂದ ದೇವರ ವಾಕ್ಯದ ದೃಷ್ಟಿಕೋನವು ನಮ್ಮನ್ನು ಬಿಡುಗಡೆಗೊಳಿಸುತ್ತವೆ.

ಸತ್ಯವು ಮಾತ್ರವೇ ಸಮಂಜಸವಾಗಿದೆ "ತರ್ಕಬದ್ಧವಾಗಿದೆ, ಇದು ಸತ್ಯವಾಗಿದೆ: ಅದು ಬೇರೆ ಯಾವುದೂ ಮಾಡಲಾಗದ ರೀತಿಯಲ್ಲಿ ನಮ್ಮ ಬಯಕೆಗಳನ್ನು ತೃಪ್ತಿಗೊಳಿಸುತ್ತದೆ."

ನಮ್ಮ ಕರ್ತನಾದ ಯೇಸುವಿನ ಬಗ್ಗೆ ಆತನೇ ದೇವರ ಸೃಷ್ಟಿಯ ಆರಂಭವು, ಹೀಗಾಗಿ ಆತನು ಈ ಲೋಕಕ್ಕೆ ನಮ್ಮ ವಿಮೋಚನಾರ್ಥವಾಗಿ ಮಾನವನಾಗಿ ಬರುವ ಮೊದಲೇ ಅಸ್ಥಿತ್ವವೊಂದನ್ನು ಹೊಂದಿದ್ದನು ಎಂಬೀ ಹೇಳಿಕೆಗಳು ದೇವರ ವಿವಿಧ ವಾಕ್ಯಗಳಲ್ಲಿ ಸಂಪೂರ್ಣವಾಗಿ ದೃಢಪಡುತ್ತವೆ. ಇದರ ಒಂದು ಉದಾಹರಣೆಯಾಗಿ – **"ದೇವರು ತನ್ನ ಒಬ್ಬನೇ ಮಗನನ್ನು ನಾವು ಆತನ ಮೂಲಕ ಜೀವಿಸುವುದಕ್ಕಾಗಿ ಲೋಕಕ್ಕೆ ಕಳುಹಿಸಿಕೊಟ್ಟದ್ದರಲ್ಲಿಯೇ ದೇವರ ಪ್ರೀತಿಯು ನಮ್ಮಲ್ಲಿ ಪ್ರತ್ಯಕ್ಷವಾಗಿದೆ"** (1 ಯೋಹಾನ 4:9) ಈ ವಚನದಲ್ಲಿನ ಹೇಳಿಕೆಯಲ್ಲಿ ಈ ಲೋಕಕ್ಕೆ ಬರುವ ಮೊದಲು ಆತನು ದೇವರ ಮಗನಾಗಿದ್ದನು ಎಂಬುದನ್ನು ಹೆಚ್ಚು ನಿರ್ಧಿಷ್ಟವಾಗಿ ತಿಳಿಸಲಾಗಿದೆ. ದೇವರ ಮಗನಾಗಿ ಆತನಿಗೆ ಈ ಲೋಕದಲ್ಲಿ ನೆರವೇರಿಸಲು ಒಂದು ನಿಯೋಗವನ್ನು ವಹಿಸಲಾಗಿತ್ತು. ಇಲ್ಲಿ, ಬೇರೆ ಸಂಧರ್ಭಗಳಂತೆ ವಾಕ್ಯ (ಲೋಗೋಸ್)ವನ್ನು ದೇವರು ಪಡೆದ ಒಬ್ಬನೇ ಮಗನು ಎಂಬುದಾಗಿ ಹೆಸರಿಸಲಾಗಿದೆ ಎಂಬುದನ್ನು ಕಡೆಗಣಿಸಬಾರದು. ಈ ಹೇಳಿಕೆಯ ಮೂಲಕ ವ್ಯಕ್ತಪಡಿಸಿರುವ ಆಲೋಚನೆಯೆಂದರೆ ವಾಕ್ಯನು (ಲೋಗೋಸ್) ಮಾತ್ರವೇ ದೇವರ ನೇರವಾದ ಸೃಷ್ಟಿ ಅಥವಾ ಆತನು ಮಾತ್ರವೇ ಪರಲೋಕದ ತಂದೆಯು ಪಡೆದಾತನು ಎಂಬುದು. ಉಳಿದ ಎಲ್ಲಾ ದೇವರ ಮಕ್ಕಳೂ (ದೇವದೂತರುಗಳೂ ಮತ್ತು ಮಾನವರು) ಲೋಗೋಸ್ ಮೂಲಕ ಆತನ ಪರೋಕ್ಷ ಸೃಷ್ಟಿಗಳಾಗಿದ್ದಾರೆ. ಆದುದರಿಂದ ಈ ಹೇಳಿಕೆಯ ಅನುರೂಪತೆ, ನೈಜತೆಯೆಂದರೆ ಆತನು ಮಾತ್ರವೇ ದೇವರು ಪಡೆದ ಏಕೈಕನು ಎಂಬುದು.

ಮತ್ತೊಂದು ಉದಾಹರಣೆಯನ್ನು ತೆಗೆದುಕೊಳ್ಳೋಣ : **"ದೇವರು ತನ್ನ ಮಗನ ಮುಖಾಂತರ ಲೋಕಕ್ಕೆ ರಕ್ಷಣೆಯಾಗಬೇಕೆಂದು ಆತನನ್ನು ಕಳುಹಿಸಿಕೊಟ್ಟನೇ ಹೊರತು ತೀರ್ಪುಮಾಡುವುದಕ್ಕಾಗಿ ಕಳುಹಿಸಲಿಲ್ಲ"** (ಯೋಹಾನ 3:17). ಇಲ್ಲಿಯೂ ಸಹಾ ಆತನ ಕಳುಹಿಸೋಣ ಮತ್ತು ನಿಯೋಗಗಳಲ್ಲಿ ಆತನ ಮಾನವ ಪೂರ್ವ ಸ್ವರೂಪವು ಸ್ಪಷ್ಟವಾಗುತ್ತದೆ. ಲೋಗೋಸ್ ಬಗ್ಗೆ ಈ ಹೇಳಿಕೆಗಳು ಸುವಾರ್ತಿಕನ ಮೂಲಕ ನಮಗೆ ಪ್ರಸ್ತುತಿಪಡಿಸಿರುವ ಈ ಸಂಗತಿಯ ಇತಿಹಾಸಕ್ಕೆ ತಕ್ಕಂತೆ ಇದೆ. ಆತನು ಪ್ರಕಟಿಸುವುದೇನೆಂದರೆ – **"ಆತನು ಲೋಕದಲ್ಲಿ ಇದ್ದನು; ಮತ್ತು ಲೋಕವು ಆತನ ಮೂಲಕವಾಗಿ ಉಂಟಾಯಿತು; ಆದರೂ ಲೋಕವು ಆತನನ್ನು ಅರಿಯಲಿಲ್ಲ"**. ಪುನಃ **"ಆ ವಾಕ್ಯವೆಂಬುವವನು ನರವತಾರ ಎತ್ತಿ ನಮ್ಮ ಮಧ್ಯೆ ವಾಸಮಾಡಿದನು. ನಾವು ಆತನ ಮಹಿಮೆಯನ್ನು ನೋಡಿದೆವು; ಆ ಮಹಿಮೆಯು ತಂದೆಯ ಬಳಿಯಿಂದ ಬಂದ ಒಬ್ಬನೇ ಮಗನಿಗೆ ಇರತಕ್ಕ ಮಹಿಮೆ. ಆತನು ಕೃಪೆಯಿಂದಲೂ ಸತ್ಯದಿಂದಲೂ ತುಂಬಿದವನಾಗಿದ್ದನು"** (ಯೋಹಾನ 1:10 ಮತ್ತು 14ನೇ ವಚನಗಳು). ತನ್ನ ಪೂರ್ವ ಅಸ್ಥಿತ್ವದ ಬಗ್ಗೆ ನಮ್ಮ ಕರ್ತನ ಸ್ವಂತ ಹೇಳಿಕೆಗಳು ವಿವಾದರಹಿತವಾದವುಗಳಾಗಿವೆ. . ಆತನು ಯೋಸೇಫನನ್ನು ತನ್ನ ತಂದೆ ಎಂದು ಎಲ್ಲಿಯೂ ಸ್ವೀಕರಿಸಲಿಲ್ಲ ಅಥವಾ ಆತನ ಈ ಲೋಕದ ಜೀವಿತವು ಆತನ ಅಸ್ಥಿತ್ವದ ಆರಂಭ ಎಂಬುದಾಗಿಯೂ ಒಪ್ಪಿಕೊಳ್ಳಲಿಲ್ಲ.

ಇದಕ್ಕೆ ವ್ಯತಿರಿಕ್ತವಾಗಿ, ಆತನು ಸತತವಾಗಿ ಯೆಹೋವನನ್ನು ತನ್ನ ತಂದೆ ಎಂದು ಸೂಚಿಸಿದ್ದನ್ನು ಗಮನಿಸಬೇಕು. **"ತಂದೆಯು ಪ್ರತಿಷ್ಠೆಮಾಡಿ ಲೋಕಕ್ಕೆ ಕಳುಹಿಸಿಕೊಟ್ಟವನಾದ ನಾನು ದೇವರ ಮಗನಾಗಿದ್ದೇನೆಂದು ಹೇಳಿದ್ದಕ್ಕೆ ನೀನು ದೇವದೂಷಣೆ ಮಾಡುತ್ತೀ ಅನ್ನುತ್ತೀರೋ?"** (ಯೋಹಾನ 10:36) ಎಂಬ ಆತನ ಮಾತುಗಳನ್ನು ನೆನಪುಮಾಡಿಕೊಳ್ಳಿರಿ. ಆತನ ಈ ಲೋಕದ ತಾಯಿಯಾದ ಮರಿಯಳಿಗೆ **"ನಾನು ನನ್ನ ತಂದೆಯ ಮನೆಯಲ್ಲಿ ಇರಬೇಕಾದದ್ದು ನಿಮಗೆ ತಿಳಿಯಲಿಲ್ಲವೇ?"** (ಲೂಕ 2:49) ಎಂದು ಪ್ರಶ್ನಿಸುತ್ತಾನೆ. ಆತನ ಶಿಷ್ಯರಿಗೆ ಆತನು ಪ್ರಕಟಿಸಿ ಹೇಳಿದ್ದೇನೆಂದರೆ – **'ನಾನು ಪರಲೋಕದಿಂದ ಬಂದೆನು'** ಮತ್ತು **"ಪರಲೋಕದಿಂದ ಇಳಿದು ಬಂದ ಜೀವದ ರೊಟ್ಟಿ ನಾನೇ"** (ಯೋಹಾನ 6:38,51) ಎಂಬುದೇ. ಆತನ ಕಾಲದಲ್ಲಿ ಅನೇಕರು ಇವುಗಳನ್ನು ನಂಬಲಿಲ್ಲ. ಅನೇಕರೂ ಇನ್ನೂ ಇದನ್ನು ನಂಬುತ್ತಿಲ್ಲ. ಆದರೆ ಸತ್ಯವು ಮಾತ್ರ ಉಳಿದುಕೊಳ್ಳುತ್ತದೆ. ಇದನ್ನು ಕೇಳಿದ ಕೆಲವರು **'ಇದು ಹೇಗೆ ಸಾಧ್ಯ?'** ಎಂದು ಕೇಳಿದರು. ಆತನ ಕೆಲವೂ ಶಿಷ್ಯರು ಇದನ್ನು ಕೇಳಿದಾಗ **"ಇದು ಕಠಿಣವಾದ ಮಾತು, ಇದನ್ನು ಯಾರು ಕೇಳಾರು ಅಂದುಕೊಂಡರು. ಯೇಸು ಇದಕ್ಕೆ ತನ್ನ ಶಿಷ್ಯರು ಗುಣುಗುಟ್ಟುತ್ತಾರೆಂದು ತನ್ನಲ್ಲಿ ತಿಳಿದುಕೊಂಡು ಅವರಿಗೆ – ನನ್ನ ಮಾತಿನಿಂದ ನಿಮಗೆ ಬೇಸರವಾಯಿತೋ? ಹಾಗಾದರೆ ಮನುಷ್ಯಕುಮಾರನು ತಾನು ಮೊದಲು ಇದ್ದಲ್ಲಿಗೆ ಏರಿಹೋಗುವುದನ್ನು ನೀವು ನೋಡಿದರೆ ಏನನ್ನುವಿರಿ? ಬದುಕಿಸುವಂಥದ್ದು ಆತ್ಮವೇ; ಮಾಂಸವು ಯಾವುದಕ್ಕೂ ಬರುವುದಿಲ್ಲ. ನಾನು ನಿಮಗೆ ಹೇಳಿರುವ ಮಾತುಗಳೇ ಆತ್ಮವಾಗಿಯೂ ಜೀವವಾಗಿಯೂ ಅವೆ. ಆದರೆ ನಿಮ್ಮಲ್ಲಿ ಕೆಲವರು ನಂಬದವರಾಗಿದ್ದಾರೆ ಅಂದನು . . . ಅಂದಿನಿಂದ ಅನೇಕರು ಹಿಂಜರಿದು ಆತನ ಕೂಡ ಸಂಚಾರ ಮಾಡುವುದನ್ನು ಬಿಟ್ಟರು"** – ಯೋಹಾನ 6: 60–66.

ಆತನು ಫರಿಸಾಯರ ಮುಂದೆ ಕೆಲವೊಂದು ಸತ್ಯ ಸಂಗತಿಗಳನ್ನು ಘೋಷಿಸಿದ ಬಗ್ಗೆ ಕೇಳಿರಿ – **"ನಾನು ಎಲ್ಲಿಂದ ಬಂದವನಾಗಿಯೂ. ಎಲ್ಲಿಗೆ ಹೋಗುವವ ನಾಗಿಯೂ ಇದ್ದೇನೆಂಬುದು ನನಗೆ ಗೊತ್ತಿದೆ . . . "ನಾನು ಮೇಲಿನವನು .. . ನಾನು ಈ ಲೋಕದವನಲ್ಲ . . . ನಾನು ದೇವರಿಂದಲೇ ಹೊರಟು ಈ ಲೊಕಕ್ಕೆ ಬಂದವನಾಗಿದ್ದೇನೆ, ನನ್ನಷ್ಟಕ್ಕೆ ನಾನೇ ಬರಲಿಲ್ಲ; ಆತನೇ ನನ್ನನ್ನು ಕಳುಹಿಸಿದ್ದಾನೆ . . ನನ್ನ ತಂದೆಯು ನನ್ನ ಮಾತುಗಳನ್ನು ಕೇಳುತ್ತಾನೆ . . .ನಾನಂತು ಆತನನ್ನು ಬಲ್ಲೆನು. ಆತನನ್ನು ಅರಿಯೆನೆಂದು ಹೇಳಿದರೆ ನಿಮ್ಮ ಹಾಗೆ ಸುಳ್ಳುಗಾರನಾಗುವೆನು". ಆಗ ಯೆಹೂದ್ಯನು ಆತನಿಗೆ ಹೇಳಿದನು; ನಮ್ಮ ಮೂಲಪುರುಷನಾದ ಅಬ್ರಹಾಮನಿಗಿಂತ ನೀನು ದೊಡ್ಡವನೋ?** (ಯೋಹಾನ 8:14,23,42,55). **"ನಿಮ್ಮ ಮೂಲಪುರುಷನಾದ ಅಬ್ರಹಾಮನು ನನ್ನ ದಿನವನ್ನು ತಾನು ನೋಡೇನೆಂದು ಉಲ್ಲಾಸಪಟ್ಟನು; ಅದನ್ನು ನೋಡಿ ಸಂತೋಷಗೊಂಡನು ಅಂದನು. ಅದಕ್ಕೆ ಯೆಹೂದ್ಯರು "ನಿನಗೆ ಇನ್ನೂ ಐವತ್ತುವರ್ಷವಾಗಿಲ್ಲ, ನೀನು ಅಬ್ರಹಾಮನನ್ನು ನೋಡಿದ್ದೀಯಾ?"** ಎಂದು ಪ್ರಶ್ನಿಸಲು ಯೇಸು ಅವರಿಗೆ **"ನಿಮಗೆ ನಿಜನಿಜವಾಗಿ ಹೇಳುತ್ತೇನೆ, ಅಬ್ರಹಾಮನು ಹುಟ್ಟುವುದಕ್ಕಿಂತ ಮುಂಚಿನಿಂದಲೂ ನಾನು ಇದ್ದೇನೆ ಅಂದನು"** (ವಚನಗಳು 56–58 ನೋಡಿರಿ). ಅಬ್ರಹಾಮನು ಮೆಸ್ಸಿಯನ ಬಗ್ಗೆ ದೇವರ ವಾಗ್ದಾನದಲ್ಲಿಟ್ಟ ವಿಶ್ವಾಸವೆಂಬ ಕಣ್ಣುಗಳ ಮೂಲಕ ಕ್ರಿಸ್ತನ ದಿನವನ್ನು ನೋಡಿದನು. ಆತನು ಕ್ರಿಸ್ತನ ಬಲಿದಾನವನ್ನೂ ನೋಡಿದ್ದಿರಬಹುದು. ಇದು ಆತನ ಒಬ್ಬನೇ ಮಗನಾದ ಇಸಾಕನ ಬಲಿಯಲ್ಲಿ ಪ್ರತಿರೂಪಿಸಲ್ಪಟ್ಟಿತ್ತು. ಆದರೆ ಎಲ್ಲಾ ಘಟನೆಗಳಲ್ಲಿಯೂ ಆತನು ಮೆಸ್ಸಿಯನ ಮುಂಬರುವ ಮಹಿಮೆಯ ದಿನಗಳನ್ನು ಅಂದರೆ ಮಿಲಿಯಾಂತರ ಯುಗ ಮತ್ತು ಲೋಕದ ಎಲ್ಲಾ ಕುಟುಂಬಗಳ ಮೇಲೆ ಈ ವಾಗ್ದತ್ತ ಸಂತಾನದ ಮೂಲಕ ಅದರ ಆಶೀರ್ವಾದಗಳನ್ನು ನೋಡಿದನು. ಈ ಪ್ರತೀಕ್ಷೆಯು ಆತನನ್ನು ಸಂಪ್ರೀತನನ್ನಾಗಿ ಮಾಡಿದ್ದರೆ ಆಶ್ಚರ್ಯವಿಲ್ಲ. ಆತನು ತನ್ನ ವಿಶ್ವಾಸದ ಕಣ್ಣುಗಳ ಮೂಲಕ ಪರಲೋಕ ನಗರಿಯಾದ ನೂತನ ಯೆರೂಸಲೇಮನ್ನು, ಮಹಿಮೆಯುಳ್ಳ ಸಭೆಯನ್ನು. ರಾಜವರ್ಗವನ್ನು ನೋಡಿದನು. ಅದೇ ರೀತಿಯಲ್ಲಿ ಆತನು ಆ ರಾಜ್ಯದ ಮೂಲಕವಾಗಿ ಈ ಲೋಕವು ಆಶೀರ್ವದಿಸಲ್ಪಟ್ಟಿರುವ ಪರಲೋಕದ ದೇಶವನ್ನು ಸಹಾ ನೋಡಿದನು – ಇಬ್ರಿಯ 11:10, 16, 12:22 ಮತ್ತು 13:14 ಇವುಗಳನ್ನು ನೋಡಿರಿ.

ಈ ಮಾತುಗಳ ಅರ್ಥದ ಬಗ್ಗೆ ಯಾವು ತಪ್ಪುಗಳೂ ಇರುವುದಿಲ್ಲ. ನಮ್ಮ ಕರ್ತನು ತಾನು ಅಬ್ರಹಾಮನಿಗಿಂತ ಮುಂಚಿನಿಂದಲೂ ಇದ್ದವನು ಎಂದು ಕಂಠೋಕ್ತವಾಗಿ ಹೇಳುತ್ತಾನೆ. ದೇವರ ಪರಿಶುದ್ಧ ಗ್ರಂಥಗಳು ಸಹಾ ಎಲ್ಲಿಯೂ ಒಬ್ಬನೇ ಪಡೆದಾತನ ಇರುವಿಕೆಯು ಪ್ರಾರಂಭವಾದನಂತರ ದೇವರ ಸೃಷ್ಠಿ ಮೊದಲುಗೊಂಡು ಕಲ್ವಾರಿಯಲ್ಲಿ ಮೂರು ದಿನ ಸ್ಥಬ್ಧವಾಗಿದ್ದು ಹೊರತು ಒಬ್ಬನೇ ಮಗನ ಆಸ್ತಿತ್ವ ಎಂದೂ ಸ್ಥಗಿತವಾಗಿರಲಿಲ್ಲ. **ನಂತರ ಕ್ರಿಸ್ತನು ಜೀವಿತನಾಗಿ ಎದ್ದು ಬಂದುದರಿಂದ ಆತನು ಇನ್ನು ಮುಂದೆ ಸಾಯತಕ್ಕವನಲ್ಲ. ಮರಣವು ಇನ್ನೂ ಆತನನ್ನು ಆಳುವುದಿಲ್ಲ** (ರೋಮಾ. 6:9). ಆತನು ಮಾನವರ ಪಾಪ ಪ್ರಾಯಶ್ಚಿತ್ತ ಬಲಿಯ ಉದ್ದೇಶದಿಂದ ದೇವದೂತರುಗಳಿಗಿಂತ ಸ್ವಲ್ಪವೇ ಕಡಿಮೆಯಾಗಿ ಮಾನವನಾಗಿ ಜನಿಸಿದ ಘಟನೆಯು ಆತನು ಮಾನವ ಕಂದನಾಗಿ ಜನಿಸುವ ಮುನ್ನ ಇದ್ದ ಆತ್ಮಿಕ ಸ್ವಭಾವದ ಸಾವನ್ನು ಒಳಗೊಂಡಿರಲಿಲ್ಲ. ಆದರೆ ಅದು ಉನ್ನತ ಅಥವಾ ಆತ್ಮೀಕ ಸ್ಥಿತಿಯಿಂದ ಕೆಳಮಟ್ಟದ ಅಥವಾ ಮಾನವ

ಸ್ವಭಾವದ ಸ್ಥಿತಿಗೆ ರೂಪಾಂತರವಾಗಿತ್ತು. ಆದುದರಿಂದ **"ಅಬ್ರಹಾಮನು ಹುಟ್ಟುವುದಕ್ಕಿಂತ ಮುಂಚಿನಿಂದಲೂ ನಾನು ಇದ್ದೇನೆ"** ಎಂಬ ನಮ್ಮ ಕರ್ತನ ಹೇಳಿದ ಮಾತುಗಳು ಮಧ್ಯಂತರ ಕಾಲದಲ್ಲಿ ಆತನ ಅಸ್ಥಿತ್ವಕ್ಕೆ ಯಾವುದೇ ನಿಲುಗಡೆಯು ಇದ್ದಿಲ್ಲ ಎಂಬುದನ್ನು ಸೂಚಿಸುತ್ತದೆ ಮತ್ತು ನಿರ್ಧಾರಾತ್ಮಕವಾಗಿ ದೇಹಧಾರಿಯಾಗಿ ಬಂದ ದೇವರ ಮಗನಾದ ಯೇಸುಕ್ರಿಸ್ತನು ಸೃಷ್ಟಿಯ ಜೇಷ್ಟಪುತ್ರನಾದ ದೇವರವಾಕ್ಯವಾಗಿದ್ದಾನೆಂಬುದನ್ನು ಗುರುತಿಸುತ್ತದೆ. ಸಹಜವಾಗಿ, ನಮ್ಮ ಕರ್ತನ ಈ ಸಾಕ್ಷ್ಯವು ಅದನ್ನು ಕೇಳಿದ ಮತ್ತು ನಂತರದಲ್ಲಿ ಕೇಳುವ ಅನೇಕರಿಗೆ ಒಪ್ಪಿಗೆಯಾಗಲಿಲ್ಲ. ಇಲ್ಲಿ ಹಠಮಾರಿತನದ ಪ್ರವೃತ್ತಿ ಇದ್ದಂತೆ ತೋರಿಬರುತ್ತದೆ. ಇದು ಮಾನವ ಜಾತಿಯನ್ನು ದೇವರ ಹೇಳಿಕೆಯ ಸರಳವಾದ ಮಾತುಗಳನ್ನು ತಿರಸ್ಕರಿಸುವಂತೆ ಮಾಡಿದ್ದಲ್ಲದೆ ಆತನೂ ಒಬ್ಬ ಪತನಗೊಂಡ ಪಾಪಿ ಮಾನವ ಜನಾಂಗದ ಸದಸ್ಯನು ಅಥವಾ ಆತನ ತಂದೆಯಂತೆ ಇರುವಾತನು ಎಂದು ಆಯ್ಕೆ ಮಾಡಿಕೊಳ್ಳುವಂತೆ ಮಾಡಿತು. ಕೇವಲ ದೀನರು ಮಾತ್ರವೇ 'ಬೇರೂರಿದ ವಾಕ್ಯವನ್ನು ದೀನತೆಯಿಂದ ಅಂಗೀಕರಿಸಲು ಸಿದ್ಧರಾಗಿದ್ದಾರೆ. ಅದು ಅವರನ್ನು ನಿಜವಾಗಿಯೂ ವಿವೇಕಿಗಳನ್ನಾಗಿ ಮಾಡುತ್ತದೆ" ಅವರಿಗೋಸ್ಕರ ದೇವರ ವಾಕ್ಯದ ಸಾಕ್ಷ್ಯವು ಉದ್ದೇಶಿಸಲ್ಪಟ್ಟಿದೆ' (ಯೆಶಾಯ 61:1 ಮತ್ತು ಯಾಕೋಬ 1:21 ಇವುಗಳನ್ನು ನೋಡಿರಿ). ಪ್ರಭುವಿನ ಸಾಕ್ಷ್ಯವನ್ನು ಕೇಳಿ ಅವನ್ನು ತಿರಸ್ಕರಿಸಿ, ಆತನನ್ನು ಕೊಲ್ಲಲು ಕಲ್ಲುಗಳನ್ನು ತೆಗೆದುಕೊಂಡರು, ಹಾಗೆಯೇ ಈಗಲೂ ಕೆಲವರು ಈ ಸತ್ಯವನ್ನು ನಿರಾಕರಿಸುತ್ತಾರೆ ಮತ್ತು ಪ್ರಭುವಿನ ಮಾತುಗಳನ್ನು ಅಂಗೀಕರಿಸಿ ಅವುಗಳನ್ನು ಸರಳವಾಗಿ ಬೋಧಿಸುವಂತ ಅವರುಗಳಿಗೆ ಸಾಂಕೇತಿಕವಾಗಿ ಕಲ್ಲೆಸೆಯುತ್ತಾರೆ. ಅಂದಿನಂತೆ ಇಂದೂ ಇದಕ್ಕೆ ಕಾರಣ ಅವರುಗಳು ತಮಗೆ ಪ್ರಕಟಿಸಿಕೊಂಡಿರುವ ತಂದೆಯನ್ನಾಗಲೀ, ಆತನ ಮಗನನ್ನಾಗಲೀ ಅವರು ಅರಿತುಕೊಳ್ಳಬೇಕಿತ್ತು. ಆದರೆ ಅರಿತುಕೊಳ್ಳಲೇ ಇಲ್ಲ.

ಈ ಪ್ರಕರಣದಲ್ಲಿ ನಮ್ಮ ಈ ಕರ್ತನ ಮಾತುಗಳು ಇನ್ನೂ ಅನ್ವಯವಾಗುತ್ತವೆ: **"ತಂದೆಯ ಹೊರತು ಇನ್ನಾವನೂ ಮಗನನ್ನು ತಿಳಿದವನಲ್ಲ; ಮಗನೇ ಹೊರತು ಇನ್ನಾವನೂ ತಂದೆಯನ್ನು ತಿಳಿದವನಲ್ಲ; ಮತ್ತು ಮಗನು ತಂದೆಯನ್ನು ಯಾರಿಗೆ ಪ್ರಕಟಿಸುವುದಕ್ಕೆ ಮನಸ್ಸುಳ್ಳವನಾಗಿದ್ದಾನೋ ಅವನೂ ಆತನನ್ನು ತಿಳಿದವನಾಗಿದ್ದಾನೆ"** (ಮತ್ತಾಯ 11:27). ಲೋಕವು ಆತನನ್ನು ತಿಳಿದಿರುವುದಿಲ್ಲ; ಆತನ ಶ್ರೇಷ್ಟವಾದ ಮೂಲವನ್ನು ಮತ್ತು ಅದರ ಸಲುವಾಗಿ ಆತನು ಅನುಭವಿಸಿದ ಬಾಧೆಯನ್ನು ಅರಿತಿರುವುದಿಲ್ಲ. ನಮ್ಮ ಕರ್ತನ ವ್ಯಕ್ತಿತ್ವದಲ್ಲಿ ನಡೆದ ಸೃಷ್ಟಿಯ ಕಾರ್ಯಕ್ಕೂ ಮತ್ತು ಆತನು ಶರೀರಧಾರಿಯಾಗಿ ಬರುವ ಮಧ್ಯಂತರದ ಅವಧಿಗೂ ಬಹುಶಃ ದೀರ್ಘಕಾಲ ಹಿಡಿಯಿತೆಂಬುದನ್ನು ನಾವು ನೆನಪು ಮಾಡಿಕೊಳ್ಳುವಾಗ, ಮತ್ತು ನಾವು ಇನ್ನೂ ಆಲೋಚಿಸಿ ಆ ಅವಧಿಯಲ್ಲಿ ಆತನು ತಂದೆಯ ಬಳಿಯಲ್ಲಿದ್ದನು ಎಂದು ನೆನಪುಮಾಡಿಕೊಳ್ಳುವಾಗ **"ಪ್ರತಿನಿತ್ಯವೂ ಆತನು ಅತ್ಯಾನಂದ ಪಡುವವನಾಗಿ, ಆತನ ಮುಂದೆ ಉಲ್ಲಾಸದಿಂದಿರುವಾಗ"** ಮಗನು ತಂದೆಯನ್ನು ಬಲ್ಲನೆಂಬುದಕ್ಕೂ, ಆದರೆ, ಆತನ ಶಿಷ್ಯರಾಗಲೀ, ಪ್ರಪಂಚವಾಗಲೀ ತಂದೆಯನ್ನು ಬಲ್ಲವರಲ್ಲ ಎಂಬುದಕ್ಕೆ ನಾವು ಆಶ್ಚರ್ಯ ಪಡಬೇಕಾದ್ದಿಲ್ಲ. ಯಾಕೆಂದರೆ ನಾವು ಆತನನ್ನು ಪ್ರಕಟಗೊಂಡ ವಾಕ್ಯದ ಮೂಲಕ ಕಲಿತುಕೊಳ್ಳಲಿದ್ದೇವೆ ಮತ್ತು ದೀರ್ಘಕಾಲದ ಯೋಜನೆಗಳು ಈ ಮೂಲಕ ಬಿಚ್ಚಿಕೊಳ್ಳಲಿವೆ. ಆತನು ಪುನಃ ಪ್ರಕಟಿಸುವುದನ್ನು ಕೇಳಿರಿ – **"ನೀತಿಸ್ವರೂಪನಾದ ತಂದೆಯೇ, ಲೋಕವಂತೂ ನಿನ್ನನ್ನು ತಿಳಿಯಲಿಲ್ಲ. ಆದರೆ ನಾನು ನಿನ್ನನ್ನು ತಿಳಿದಿದ್ದೇನೆ "** – ಯೋಹಾನ 17:25.

ಪರಲೋಕ ಸಂಗತಿಗಳ ಅದ್ಭುತವಾದ ಜ್ಞಾನದ ಬೀಗದ ಕೈಯು ಈ ಹೇಳಿಕೆಯಲ್ಲಿ ಅಡಗಿದೆ. **"ಮೇಲಣಿಂದ ಬರುವವನು ಎಲ್ಲರ ಮೇಲೆ ಇದ್ದಾನೆ; ಭೂಲೋಕದಿಂದ ಹುಟ್ಟಿದವನು ಭೂಲೋಕದವನಾಗಿದ್ದು ಭೂಲೋಕದ ಮಾತುಗಳನ್ನು ಆಡುತ್ತಾನೆ; ಪರಲೋಕದಿಂದ ಬರುವವನು ಎಲ್ಲರ ಮೇಲಿದ್ದಾನೆ. ತಾನು ನೋಡಿ ಕೇಳಿದ್ದಕ್ಕೆ ಸಾಕ್ಷಿಕೊಡುತ್ತಾನೆ"** (ಯೋಹಾನ 3:31,32). ಹಾಗಾದರೆ, ಆತನ ವಿರೋಧಿಗಳು **"ಇವನಿಗೆ ಈ ಜ್ಞಾನವೂ, ಮಹತ್ಕಾರ್ಯಗಳೂ ಎಲ್ಲಿಂದ ಬಂದಿದ್ದಾವು?"** ಎಂದು ಕೇಳಿದ್ದಕ್ಕೂ ನಾವು ಆಶ್ಚರ್ಯಪಡುವ ಕಾರಣವಿಲ್ಲ. ಪರಲೋಕದ ಸಂಗತಿಗಳ ಬಗ್ಗೆ ಆತನಿಗಿದ್ದ ಜ್ಞಾನವು, ಮತ್ತು ತಂದೆ ದೇವರೊಂದಿಗೆ ಆತನಿಗಿದ್ದ ನಿಕಟ ಹಾಗೂ ದೀರ್ಘವಾದ ಪರಿಚಯವು, ತಂದೆಯ ವಾಗ್ದಾನಗಳ ಬಗ್ಗೆ ಸಂಪೂರ್ಣವಾದ ವಿಶ್ವಾಸವನ್ನು ಪಡಕೊಳ್ಳುವಂತೆ ಮಾಡಿದೆ ಮತ್ತು ಇವು ಆತನನ್ನು ಈ ಲೋಕವನ್ನೂ, ಶರೀರವನ್ನೂ ಮತ್ತು ಪಿಶಾಚನನ್ನೂ ಜಯಿಸುವಂಥಾ, ಮತ್ತು ನಮ್ಮ ಪಾಪನಿವಾರಣಾರ್ಥವಾದ ಸಮರ್ಪಕ ಯಜ್ಞವೊಂದು ಸಮರ್ಪಿಸುವಂತೆ ಸರ್ವಸಂಪೂರ್ಣನಾದ ವ್ಯಕ್ತಿಯನ್ನಾಗಿಸಿವೆ. ಆದುದರಿಂದ ಪ್ರವಾದಿಯ ಮೂಲಕ **"ಧರ್ಮಾತ್ಮನಾದ ನನ್ನ ಸೇವಕನು ತನ್ನ ಜ್ಞಾನದ ಮೂಲಕ ಬಹುಜನರನ್ನು ಧರ್ಮಮಾರ್ಗಕ್ಕೆ ತರುವನು; ಅವರ ಅಪರಾಧಗಳನ್ನು ಹೊತ್ತುಕೊಂಡು ಹೋಗುವನು"** (ಯೆಶಾಯ 53:11) ಎಂದು ಬಹಳ ಹಿಂದೆಯೇ ಪ್ರವಾದಿಸಲ್ಪಟ್ಟಿತ್ತು.

ಹೀಗೆ, ಯಾರು ದೈವಿಕ ಬೆಳಕಿನಲ್ಲಿ ನಂಬಿಕೆಯಲ್ಲಿ ನಡೆಯುತ್ತಾರೋ ಅಂಥವರು ತಂದೆ ದೇವರನ್ನಾಗಲೀ, ಆತನ ಮಗನನ್ನಾಗಲೀ ಬಲ್ಲವರಾಗಿದ್ದಾರೆ. ಅಥವಾ ಅವರುಗಳು ಒಟ್ಟಾಗಿ ಸೇರಿಕೊಂಡು ಮಾನವಜಾತಿಗಾಗಿ

ನೆರವೇರಿಸುತ್ತಿರುವ ಪಾಪನಿವೃತ್ತಿಯ ಮಹಾ ಕಾರ್ಯವನ್ನು ಸ್ಪಷ್ಟವಾಗಿ ಮತ್ತು ಸರಿಯಾಗಿ ಮೆಚ್ಚಿಕೊಳ್ಳುತ್ತಾರೆ. ಆದರೆ, ಇದಕ್ಕೂ ಬಹಳ ಮುಂಚೆ, ಸಭೆಯ ಆಯ್ಕೆಯು ಪೂರ್ಣಗೊಂಡ ಮೇಲೆ, ಕುರಿಮರಿಯ ಪತ್ನಿಯಾದ ಮದಲಗಿತ್ತಿಯು ತನ್ನ ಪ್ರಭುವಿನೊಂದಿಗೆ ಮಹಿಮೆಯಲ್ಲಿಯೂ ಭಾಗಿಯಾಗುವಾಗ, ರಾಜ್ಯವು ಬರುವಾಗ, ಕರ್ತನ ಜ್ಞಾನವು ಲೋಕವನ್ನೆಲ್ಲಾ ಆವರಿಸಿಕೊಳ್ಳುವುದು ಮತ್ತು ವಾಕ್ಯನ (ಲೋಗೋಸ್) ಮೂಲಕ ಎಲ್ಲವನ್ನೂ ಸೃಷ್ಟಿಸಿದ ತಂದೆ ದೇವರ ಶಕ್ತಿಯು ಆತನ ಮೂಲಕ ಪ್ರಯೋಗಿಸಲ್ಪಡುವುದು. ಆತನು ರಕ್ಷಕನಾಗಿ ಪುನಃ ಸ್ಥಾಪಿಸಿ ಮತ್ತು ಸಮರ್ಪಕಗೊಳಿಸುವಾಗ ಆತನನ್ನು ತಿಳಿದುಕೊಳ್ಳುವ ಭಾಗ್ಯವನ್ನು ಹೊಂದುವವರು ಆತನ ನೀತಿಯುಳ್ಳ ಅಗತ್ಯತೆಗಳಿಗೆ ಶರಣಾಗುತ್ತಾರೆ. ಹೀಗಾಗಿ ಅಂತ್ಯದಲ್ಲಿ ಸೃಷ್ಟಿಯಲ್ಲಿ ಯೆಹೋವನ ಕಾರ್ಯಕರ್ತನಾದ ನಮ್ಮ ಕರ್ತನ ಶಕ್ತಿಯು ಪೂರ್ಣವಾಗಿ ಸಮವಾಗುತ್ತದೆ ಮತ್ತು ಯೆಹೋವನ ಕಾರ್ಯಭಾರಿಯಾಗಿ ಆತನು ಲೋಕವನ್ನು ಪುನಃವಶಪಡಿಸಿಕೊಂಡು ಅದನ್ನು ಆಶೀರ್ವದಿಸುವಾಗ, ಅದು ಆತನ ಶಕ್ತಿಯಲ್ಲಿ ಆದರ್ಶವಾಗಿ ತೋರಿಬರುತ್ತದೆ. ಈ ರೀತಿಯಲ್ಲಿ ಕೀರ್ತನೆಗಾರನ **"ನಿನ್ನ ಯುವಕ ಸೈನಿಕರು ಉದಯಕಾಲದ ಇಬ್ಬನಿಯಂತಿರುವರು"** (ಕೀರ್ತನೆ 110:3) ಎಂಬ ವಾಗ್ದಾನವು ನೆರವೇರುವುದು.

ನಮ್ಮ ಕರ್ತನು ನಿಕೊದೇಮನಿಗೆ ಹೇಳಿದ ಮಾತುಗಳನ್ನು ಕೇಳಿಸಿಕೊಳ್ಳಿರಿ. ನಿಕೊದೇಮನು ಪರಲೋಕದ ಕೆಲವು ಸಂಗತಿಗಳನ್ನು ಯೇಸುವಿನಿಂದ ಕೇಳಿ ತಿಳುಕೊಳ್ಳ ಬಯಸಿದನು. ಆತನು ಜ್ಞಾನವನ್ನು ತಿರಸ್ಕರಿದನು. ಯಾಕೆಂದರೆ ಆತನು ಇನ್ನೂ ಈ ಲೋಕದ ಸಂಗತಿಗಳನ್ನು ನಂಬಿರಲಿಲ್ಲ. ದೇವರ ಲೋಕದ ಜ್ಞಾನದ ಬಗ್ಗೆ ಯೇಸು ಆತನಿಗೆ ಉತ್ತರಿಸುತ್ತಾ **"ಪರಲೋಕದಿಂದ ಇಳಿದುಬಂದವನೇ ಅಂದರೆ ಮನುಷ್ಯಕುಮಾರನೇ * ಹೊರತು ಮತ್ತ್ಯಾರೂ ಪರಲೋಕಕ್ಕೆ ಏರಿಹೋದವರಲ್ಲ"** (ಯೋಹಾನ 3:13) ಎಂದೆನ್ನುತ್ತಾನೆ. ನಂತರ ನಮ್ಮ ಕರ್ತನು ಮುಂದುವರೆದು ನಿಕೊದೇಮನಿಗೆ ದೇವರು, ಲೋಕದ ಮಾನವರಿಗಾಗಿ ಮಾಡಿರುವ ಪೂರ್ವಸಿದ್ಧತೆಯು ಅವರು ನಾಶವಾಗದಿರಲೆಂದು, ನಿತ್ಯಜೀವವನ್ನು ಪಡಕೊಳ್ಳಲೆಂದು ಮುನ್ನೇರ್ಪಾಡಿನ ಬಗ್ಗೆ ತಿಳಿಸುವವನಾಗಿ – **"ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು. ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು"** (ಯೋಹಾನ 3:16) ಎಂಬ ಅದ್ಭುತ ಮಾತುಗಳನ್ನು ಪ್ರಕಟಿಸುತ್ತಾನೆ.

ದೇವರ ಸೃಷ್ಟಿಯ ಪ್ರಾರಂಭವಾದ 'ಲೋಗೋಸ್'ನನ್ನು ಯೆಶಾಯನು **"ಅದ್ಭುತ ಸ್ವರೂಪನು, ಆಲೋಚನಾ ಕರ್ತನು, ಪರಾಕ್ರಮಿಯಾದ ದೇವರು, ನಿತ್ಯನಾದ ತಂದೆ, ಸಮಾಧಾನದ ಪ್ರಭು"** (ಯೆಶಾಯ 9:6) ಹೇಳಿದ್ದಾನೆ. ಇದನ್ನೇ ಸೊಲೊಮೋನನು **'ಜ್ಞಾನಿ'** ಎಂಬ ಹೆಸರಿನಿಂದ ಕರೆದಿದ್ದಾನೆ. ಹೀಗಿದ್ದರೂ ಇದು ಸುವಾರ್ತಿಕನಾದ ಯೋಹಾನನು ತನ್ನ ಸುವಾರ್ತೆಯ ಮೊದಲನೆಯ ಅಧ್ಯಾಯದ 1 ಮತ್ತು 18ನೇ ವಚನಗಳಲ್ಲಿ ಹೇಳಿರುವ ಹೇಳಿಕೆಗಳೊಂದಿಗೆ ಸಾಮರಸ್ಯದಿಂದಿದೆ:

**"ಯೆಹೋವನು ತನ್ನ ಸೃಷ್ಟಿಕ್ರಮದಲ್ಲಿ ಮೊದಲು ನನ್ನನ್ನು ನಿರ್ಮಿಸಿದನು. ಆತನ ಪುರಾತನ ಕಾರ್ಯಗಳಲ್ಲಿ ನಾನೇ ಪ್ರಥಮ. ಪ್ರಾರಂಭದಲ್ಲಿ ಭೂಮಿಯು ಹುಟ್ಟುವುದಕ್ಕೆ ಮುಂಚೆ, ಅನಾದಿ ಕಾಲದಲ್ಲಿ ಸ್ಥಾಪಿಸಲ್ಪಟ್ಟೆನು. ಜಲನಿಧಿಗಳಾಗಲೀ, ನೀರುತುಂಬಿದ ಬುಗ್ಗೆಗಳಾಗಲೀ ಇಲ್ಲದಿರುವಾಗ ನಾನು ಹುಟ್ಟಿದೆನು. ಬೆಟ್ಟಗಳು ಬೇರೂರಿ ನಿಲ್ಲುವುದಕ್ಕೆ ಮುಂಚೆ ಆತನು ಭೂಲೋಕವನ್ನಾಗಲೀ ಬೈಲನ್ನಾಗಲೀ, ಭೂಮಿಯ ಮೊದಲನೆಯ ಅಣುರೇಣನ್ನಾಗಲೀ ನಿರ್ಮಿಸದೆ ಇರುವಾಗ ನಾನು ಹುಟ್ಟಿದೆನು. ಆತನು ಸಾಗರದ ಮೇಲೆ ಚಕ್ರಾಕಾರವಾದ ಗೀಟನ್ನು ಎಳೆದು ಆಕಾಶಮಂಡಲವನ್ನು ಸ್ಥಾಪಿಸುವಾಗ ಅಲ್ಲಿದ್ದೆನು. ಆತನು ಗಗನವನ್ನು ಮೇಲೆ ಸ್ಥಿರಪಡಿಸಿ, ಸಾಗರದ ಸೆಲೆಗಳನ್ನು ನೆಲೆಗೊಳಿಸಿ ಪ್ರವಾಹಗಳು ತನ್ನ ಅಪ್ಪಣೆಯನ್ನು ಮೀರದ ಹಾಗೆ ಸಮುದ್ರಕ್ಕೆ ಎಲ್ಲೆಕಟ್ಟನ್ನು ನೇಮಿಸಿ ಭೂಮಿಯ ಅಸ್ತಿವಾರಗಳನ್ನು ಗೊತ್ತುಮಾಡುವಾಗ ನಾನು ಆತನ ಹತ್ತಿರ ಶಿಲ್ಪಿಯಾಗಿದ್ದುಕೊಂಡು ಪ್ರತಿದಿನವೂ ಅನಂದಿಸುತ್ತಾ ಆತನ ಮುಂದೆ ಉಲ್ಲಾಸಿಸುತ್ತಾ ಇದ್ದೆನು"** – ಜ್ಞಾನೋಕ್ತಿ 8:22–30.

ವಾಕ್ಯದ (ಲೋಗೋಸ್) ಬಗ್ಗೆ ನಾವು ಇಲ್ಲಿ – ಆತನು ದೇವರ ಸೃಷ್ಟಿಯ ಪ್ರಾರಂಭವು, ಜೇಷ್ಟಪುತ್ರನು ಮಾತ್ರವಲ್ಲ, ಅದರೊಂದಿಗೆ ಆತನು ದೇವರು ಪಡಕೊಂಡ ಏಕೈಕ ಕುಮಾರನು ಮತ್ತು ಉಳಿದೆಲ್ಲಾ ಸೃಷ್ಟಿಗಳು ಆತನಿಂದ ಮತ್ತು ಆತನ ಮೂಲಕವಾಗಿ ಎಂಬುದನ್ನು ಗಮನಿಸುವ ಅನೇಕ ಸಂಗತಿಗಳೊಂದಿಗೆ ನಮ್ಮ ಕರ್ತನ ಸ್ವಂತ ಮಾತುಗಳಲ್ಲಿ ನಾವು **"ಹೆದರಬೇಡ, ನಾನು ಮೊದಲನೆಯವನೂ, ಕಡೆಯವನೂ, ಸದಾ ಜೀವಿಸುವವನೂ ಆಗಿದ್ದೇನೆ. ಸತ್ತವನಾದೆನು, ಮತ್ತು ಇಗೋ ಯುಗಯುಗಾಂತರ ಗಳಲ್ಲಿಯೂ ಬದುಕುವವನಾಗಿದ್ದೇನೆ"** (ಪ್ರಕಟನೆ 1:17) ಎಂಬ ಒಂದು ದೃಢಪಡಿಸುವ ಹೇಳಿಕೆಯೊಂದನ್ನು ಕೇಳಿಸಿಕೊಳ್ಳುತ್ತೇವೆ. ನಮ್ಮ ಕರ್ತನು ದೇವರ ನೇರವಾದ ಸೃಷ್ಟಿ ಮಾತ್ರವಲ್ಲ, ಆತನ ಮೂಲಕವಾಗಿ ಉಳಿದೆಲ್ಲವುಗಳೂ ಸೃಷ್ಟಿಸಲ್ಪಟ್ಟವು ಮತ್ತು ನಮ್ಮ ಕರ್ತನೇ ಮೊದಲನೆಯ ಮತ್ತು ಕಡೆಯ ಸೃಷ್ಟಿಯಾಗಿದ್ದಾನೆ ಎಂಬುದು ಇದಲ್ಲದೆ ಬೇರೆ

* ಆಂಗ್ಲ ಭಾಷೆಯಲ್ಲಿ : even the son of man which is heaven ಎಂದಿದೆ. which is heaven ಎಂಬ ಪದಗಳು ಕೃತಕವಾದವು ಇವು ಹಳೆಯ ಎಂ.ಎಸ್.ಎಸ್. ಗ್ರಂಥದಲ್ಲಿ ಇರುವುದಿಲ್ಲ.

ಇನ್ನಾವ ಅರ್ಥದಲ್ಲಿಯೂ ನಮಗೆ ಕಂಡುಬರುವುದಿಲ್ಲ, ಆದುದರಿಂದ ಬೇರೆ ಯಾವುದೇ ದೃಷ್ಟಿಕೊನವು ತಪ್ಪಾಗಿದೆ ಮತ್ತು ಅವುಗಳು ಮೊದಲೇ ಹೇಳಿದ ಧರ್ಮಗ್ರಂಥಗಳೊಂದಿಗೆ ಘರ್ಷಣೆ ಯುಳ್ಳವುಗಳಾಗಿವೆ.

## "ಆ ವಾಕ್ಯವೆಂಬುವವನು ನರಾವತಾರ ಎತ್ತಿ ನಮ್ಮ ಮಧ್ಯದಲ್ಲಿ ವಾಸಮಾಡಿದನು" – ಯೋಹಾನ 1:14

## The Logos was made Flesh and Dwelt Among Us - John 1:14

ನಮ್ಮ ಕರ್ತನು ಮಾಂಸಧಾರಿಯಾಗಿ ಪ್ರಕಟಿಸಿಕೊಂಡ ಬಗ್ಗೆ ಇರುವ ಸರ್ವಸಾಮಾನ್ಯವಾದ ಆಲೋಚನೆಯನ್ನು **'ನರಾವತಾರ'** (incarnation) ಎಂದು ಹೇಳುವ ರೂಢಿಯಿದೆ. ಈ ಸಾಮಾನ್ಯವಾದ ಆಲೋಚನೆಯನ್ನು ನಾವು ಸಂಪೂರ್ಣವಾಗಿ ತಪ್ಪಾದುದು ದೇವರವಾಕ್ಯಕ್ಕನು ಸಾರವಾದುದಲ್ಲ ಎಂದು ನಂಬುತ್ತೇವೆ. ಈ **'ನರಾವತಾರ'** (incarnation) ವಿಚಾರ ಸರಣಿಯಂತೆ ಮರಿಯಳಲ್ಲಿ ಜನಿಸಿದ ಯೇಸುವಿನ ದೇಹವು ಆತ್ಮಿಕ ದೇಹದ ಕೇವಲ ಒಂದು ಹೊದಿಕೆಯನ್ನೊಳಗೊಂಡಿದೆ. ಆದುದರಿಂದ ಈ ಆಲೋಚನೆಯು ನಮ್ಮ ಕರ್ತನ ಲೌಕಿಕ ಜೀವನಕ್ಕೆ ಅಂಟಿಕೊಂಡಿದೆ. ಈ ವಿಚಾರ ಸರಣಿಯ ಪ್ರಕಾರ ನಮ್ಮ ಕರ್ತನು ತನ್ನ ಲೌಕಿಕ ಜೀವಿತದಲ್ಲಿ ಆತನು ಮರಿಯಳಿಂದ ಹೊಂದಿದ ಮಾಂಸವುಳ್ಳ ದೇಹವನ್ನು ಹೊರತುಪಡಿಸಿ ಆತನು ಇನ್ನೂ ಸಹಾ ಹಿಂದಿನಂತೆಯೇ ತನ್ನ ಆತ್ಮಿಕ ದೇಹವನ್ನೇ ಧರಿಸಿಕೊಂಡಿದ್ದನು. ಅದನ್ನು ಮಾನವನಾದ ಯೇಸು ಕ್ರಿಸ್ತನು ಎಂದು ಕರೆಯಬಹುದು. ಇದು ಹಿಂದಿನ ಕಾಲದಲ್ಲಿ ದೇವದೂತರುಗಳು ಅಬ್ರಹಾಮನಿಗೆ, ಹನೋಕನಿಗೆ, ಲೋಟನಿಗೆ ಮತ್ತಿತರರಿಗೆ ಮಾನವ ರೂಪದಲ್ಲಿ ಕಾಣಿಸಿಕೊಂಡ ಪ್ರಕಾರವಾಗಿದೆ (ಆದಿ. 18:1,2; 19:1 : ನ್ಯಾಯ 13:9–11, 16). ಯಾಕೆಂದರೆ ಈ ತಪ್ಪಾದ ಪೂರ್ವ ಪ್ರಜ್ಞೆಯು ನಿಮಿತ್ತ ಅನೇಕರಲ್ಲಿ ಗೊಂದಲಗಳುಂಟಾದವು ಮತ್ತು ಸತ್ಯವೇದಕ್ಕನುಸಾರವಲ್ಲದ ಇಂಥಾಃ ಆಲೋಚನೆಗಳು ನಮ್ಮ ಕರ್ತನ ಜೀವಿತ ಮತ್ತು ಮರಣಗಳೊಂದಿಗೆ ಸಮಾವೇಶಗೊಂಡವು. ಉದಾಹರಣೆಗೆ ಈ ವಿಚಾರಸರಣಿಯ ಪ್ರಕಾರ ನಮ್ಮ ಕರ್ತನ ಶ್ರಮೆಯು ನೈಜವಾಗಿರಲಿಲ್ಲ ಅದೊಂದು ನಟನೆಯಾಗಿತ್ತು, ಯಾಕೆಂದರೆ ಆತ್ಮಸ್ವರೂಪಿಯಾದವನಿಗೆ ಶ್ರಮೆ ಎಂಬುದೇ ತಿಳಿದಿರಲಿಲ್ಲ ಎಂಥಲೂ ಈ ವಿಚಾರಸರಣಿಯ ತರ್ಕವು ನಮ್ಮ ಕರ್ತನ ಪ್ರಾರ್ಥನೆಗಳು ಸಹಾ ನಟನೆಯಾಗಿದ್ದವು ಎಂಬ ಅಭಿಪ್ರಾಯವನ್ನು ಮೂಡಿಸುತ್ತದೆ. ಯಾಕೆಂದರೆ, ಈ ವಿಚಾರಸರಣಿಯು ಹೇಳುವುದೇನೆಂದರೆ, ಆತನು ತಾನೇ ದೇವರಾಗಿದ್ದನು ಮತ್ತು ದೇವರಿಗೆ ಪ್ರಾರ್ಥಿಸುವುದೆಂದರೆ ತನಗೆ ತಾನೇ ಪ್ರಾರ್ಥಿಸಿದಂತೆ; ಆದುದರಿಂದ ಆತನ ಪ್ರಾರ್ಥನೆಗಳು ಕೇವಲ ಮಾದರಿ ಪ್ರಾರ್ಥನೆಗಳು, ಇವುಗಳು ಕೇವಲ ಆತನ ಶಿಷ್ಯರು ಮತ್ತು ಸುತ್ತಲು ನೆರೆದ ಜನರ ಮೇಲೆ ಪ್ರಭಾವ ಮೂಡಿಸಲು ಮಾಡಿದವುಗಳು ಎಂದು ವಾದಿಸಲಾಗುತ್ತದೆ. ಅದೇ ರೀತಿಯಲ್ಲಿ ಈ ವಿಚಾರಣ ಸರಣಿಯ ಪ್ರಕಾರ ನಮ್ಮ ಕರ್ತನ ಮರಣವು ಸಹಾ ಮರಣದ ತೋರಿಕೆ ಎಂಬ ಊಹೆಗೆ ಎಡೆಮಾಡಿಕೊಡುತ್ತದೆ. ಯಾಕೆಂದರೆ ಯೇಸುವೇ ತಂದೆಯಾದ ದೇವರು ಎಂದು ಅವರು ವಾದಿಸುತ್ತಾರೆ. ಆತನು ನಿತ್ಯ ನಿರಂತರಕ್ಕೂ ಜೀವಿಸುವವನಾದುದರಿಂದ ಮರಣ ಹೊಂದಲು ಸಾಧ್ಯವೇ ಇಲ್ಲ. ಆದುದರಿಂದ ಯೇಸು ಶಿಲುಬೆಯ ಮೇಲೆ **"ನನ್ನ ದೇವರೇ, ನನ್ನ ದೇವರೇ, ಯಾಕೆ ನನ್ನನ್ನು ಕೈಬಿಟ್ಟಿದ್ದೀ"** ಎಂಬ ಸುವ್ಯಕ್ತವಾದ ಕೂಗು ಮತ್ತು ಆತನ ಮರಣ ಇವೆಲ್ಲವೂ ಸಹಾ ಅದನ್ನು ಕೇಳಿದವರ ಮೇಲೆ ಪ್ರಭಾವ ನೀಡಲು ಮಾಡಿದ ಕೇವಲ ನಮೂನೆಗಳಾಗಿವೆ. ಆದುದರಿಂದ ಈ ವಿಚಾರಸರಣಿಯ ತಾರ್ಕಿಕ ವಾದವೇನೆಂದರೆ, ಮಾನವನ ಪಾಪಗಳಿಗೆ ನಿಜವಾದ ಮರಣವಾಗಿಲ್ಲ, ಆದರೆ ಕೇವಲ ಇದರ ಒಂದು ತೋರಿಕೆ ಮಾತ್ರವೇ ನೆರವೇರಿದೆ. ಇದೊಂದು ಚಮತ್ಕಾರಿಕ ಪ್ರಭಾವ ಬೀರಬಲ್ಲ ನಾಟಕೀಯ ಪ್ರದರ್ಶನ ಹಾಗೂ ಚಲಚಿತ್ರ ಮಾದರಿಯ ನಿರೂಪಣೆ. ಮಾನವ ಜಾತಿಯಲ್ಲಿ ಪ್ರಭಾವ ಮತ್ತು ಅನುಕಂಪಗಳ ಪ್ರಜ್ಞೆ ಮೂಡಿಸುವ ಒಳ್ಳೆಯ ಉದ್ದೇಶದಿಂದ ಕೂಡಿದ ತಂತ್ರಗಾರಿಕೆಯಾಗಿದೆ ಎಂಬುದು.

ಆದರೆ ಇವೆಲ್ಲವೂ ಕೂಡಾ ತಪ್ಪು ಗ್ರಹಿಕೆಗಳಾಗಿವೆ. ಇವುಗಳು ದೇವರ ವಾಕ್ಯದಲ್ಲಿ ಪ್ರಸ್ತುತಿಪಡಿಸಿರುವ ಪ್ರಸ್ತಾಪದ ಸತ್ಯತೆಗೆ ಉಗ್ರವಾಗಿ ವಿರೋಧವಾಗಿವೆ. ದೇವರ ವಾಕ್ಯದಲ್ಲಿನ ಪ್ರಕಟನೆಯಲ್ಲಿ ನಮ್ಮ ಕರ್ತನು ತನ್ನ ಆತ್ಮೀಕ ದೇಹವನ್ನು ಮರೆಮಾಡುವಂತೆ ಈ ಪೂರ್ವ ಕಾಲದಲ್ಲಿ ಹಿಂದೆ ದೇವದೂತರುಗಳು ಮಾಡಿದಂತೆ ಮಾಂಸ ಶರೀರವೊಂದನ್ನು ಧರಿಸಿಕೊಂಡನು ಎಂದು ಹೇಳುವುದಿಲ್ಲ; ಆದರೆ ಆತನು ನಿಜವಾಗಿ ಅದನ್ನು ಬದಿಗಿಟ್ಟನು ಅಥವಾ ಗ್ರೀಕ್ ನಲ್ಲಿ ತರ್ಜುಮೆ ಗೊಳಿಸಿರುವಂತೆ **"ತನ್ನ ಮಾನವ ಪೂರ್ವ ಸ್ಥಿತಿಯನ್ನು ಸಂಪೂರ್ಣವಾಗಿ ಕಳಚಿಹಾಕಿದನು'** ಮತ್ತು ನಿಜವಾಗಿಯೂ ಆತನು ನಮ್ಮ ಸ್ಥಿತಿಯನ್ನು ತನ್ನ ಮೇಲೆ ತೆಗೆದುಕೊಂಡನು ಅಥವಾ ಮೇಲಿನ ವೇದ ವಚನವು ಹೇಳುವಂತೆ **"ಆ ವಾಕ್ಯವೆಂಬುವವನು ನರಾವತಾರ ಎತ್ತಿ ನಮ್ಮ ಮಧ್ಯದಲ್ಲಿ ವಾಸಮಾಡಿದನು"**. ಈ ಬಗ್ಗೆ ಯಾವುದೇ ಕಪಟವಿಲ್ಲ, ಯಾವುದೇ ಕೃತಿಮತೆ ಇಲ್ಲ; ಆತನು ತನ್ನ ಮಹಿಮೆ ಮತ್ತು ಶಕ್ತಿಯನ್ನು ಇಟ್ಟುಕೊಂಡು ಕೇವಲ ತನ್ನನ್ನು ದೀನನ್ನಾಗಿ ಕಾಣಿಸಿಕೊಂಡದ್ದು ಮಾತ್ರವಲ್ಲ; ಆತನು ನಿಜವಾಗಿಯೂ ಎಲ್ಲ ಸಮಯಗಳನ್ನು ಉನ್ನತವಾದ ಆತ್ಮೀಕ ಶ್ರೀಮಂತಿಕೆಯನ್ನು ಹೊಂದಿದ್ದರೂ ನಮ್ಮ ಸಲುವಾಗಿ ಬಡವನಾಗಿ ಕಾಣಿಸಿಕೊಂಡದ್ದಲ್ಲ. ಆತನು ಕೇವಲ ಸೇವಕನ ಸಮವಸ್ತ್ರಗಳನ್ನು ಧರಿಸಿಕೊಂಡದ್ದಲ್ಲ.

ಇಲ್ಲ, ಆತನು ಖಂಡಿತವಾಗಿಯೂ ಒಬ್ಬ ಮಾನವನಾದನು – **"ಆತನು ಮನುಷ್ಯನಾಗಿರುವ ಕ್ರಿಸ್ತ ಯೇಸುವೇ; ಆತನು ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು ಒಪ್ಪಿಸಿಬಿಟ್ಟನು"** – 1 ತಿಮೋ 2:5.

ತರುವಾಯ ನಾವು ವಿಶಿಷ್ಟವಾಗಿ ಆತನ ಕಾರ್ಯದಲ್ಲಿನ ಈಡುಬಲಿಯ ಲಕ್ಷಣಗಳನ್ನು ಪರಿಗಣಿಸುವಾಗ, ಆತನು ಮಾನವನಾಗಿರಬೇಕಾದುದು ನಿರಪೇಕ್ಷವಾದ ಅಗತ್ಯವಾಗಿತ್ತು – ಒಬ್ಬ ಸರ್ವಸಂಪೂರ್ಣನಾದ ಮನುಷ್ಯನಿಗಿಂತ ಕಡಿಮೆಯೂ ಅಲ್ಲ, ಹೆಚ್ಚೂ ಅಲ್ಲ. – ಯಾಕೆಂದರೆ, ಪಾಪಮಾಡಿದಾತನು ಮನುಷ್ಯನು, ವಿಮೋಚಿಸಲ್ಪಡ ಬೇಕಾದವನು ಮಾನವನು, ದೇವರ ನ್ಯಾಯವಿಧಿಯ ಪ್ರಕಾರ ಮಾನವರ ಪಾಪವನ್ನು ನಿವಾರಣೆ ಮಾಡಲು ಕೇವಲ ಮಾನವನೊಬ್ಬನು ಪರಿಹಾರ ಬೆಲೆಯನ್ನು ತೆರಬೇಕಾಗಿತ್ತು – **"ಮನುಷ್ಯನ ಮೂಲಕ ಮರಣವು ಉಂಟಾದ ಕಾರಣ, ಮನುಷ್ಯನ ಮೂಲಕ ಸತ್ತವರಿಗೆ ಪುನರುತ್ಥಾನವುಂಟಾಗುವುದು"** (1 ಕೊರಿಂಥ 15:21). ಆದರೆ ಇದರಿಂದ ನಮ್ಮ ಕರ್ತನು ನಮ್ಮಂತೆ ವಂಶಪಾರಪರ್ಯವಾದ ಅಸಂಪೂರ್ಣತೆ ಮತ್ತು ನ್ಯೂನತೆಗಳನ್ನು ಹೊತ್ತುಕೊಂಡ ಮನುಷ್ಯನಾದನು ಎಂದು ಯಾರೂ ತಪ್ಪಾಗಿ ಭಾವಿಸಬಾರದು. ಇದಕ್ಕೆ ತದ್ವಿರುದ್ಧವಾಗಿ, ಅದೇ ದೇವರ ವಾಕ್ಯವು ಪ್ರಕಟಿಸುವುದೇನೆಂದರೆ – **"ಈತನು ಪರಿಶುದ್ಧನೂ, ನಿರ್ದೋಷಿಯೂ, ನಿಷ್ಕಳಂಕನೂ, ಪಾಪಿಗಳಲ್ಲಿ ಸೇರದೆ ಪ್ರತ್ಯೇಕವಾಗಿರುವವನೂ, ಆಕಾಶಮಂಡಲಗಳಿಗಿಂತ ಉನ್ನತದಲ್ಲಿರುವವನೂ ಆಗಿರುವನು"** – ಇಬ್ರಿಯ 7:26: ಲೂಕ 1:35.

ಆತನು ತನ್ನನ್ನು ಪಾಪಿಗಳಿಂದ ಪ್ರತ್ಯೇಕಿಸಿಕೊಂಡದ್ದು ಅನೇಕರಿಗೆ ಒಂದು ಕಷ್ಟಕರವಾದ ಅಂಶವಾಗಿ ತೋರಿಬರುತ್ತಿದೆ. ಆತನೂ ಒಬ್ಬ ಮನುಷ್ಯನಾಗಿ ಯಾವ ರೀತಿಯಲ್ಲಿ ಇಡೀ ಮಾನವ ಕುಲದ ಮೇಲೆ ಪರಿಣಾಮ ಬೀರುವ ವಂಶಪಾರ್ಯಂಪರ್ಯವಾಗಿ ಬಂದಿರುವ ಕಳಂಕದಿಂದ ಮುಕ್ತನಾಗಿರಲಿಕ್ಕೆ ಹೇಗೆ ಸಾಧ್ಯ? ಇದು ಹೇಗೆ ಸಾಧ್ಯವಾಯಿತು ಎಂಬುದನ್ನು ನೋಡಲು, ಇದು ದೇವರ ಯೋಜನೆಯ ಅಡಿಯಲ್ಲಿ ಯಾವರೀತಿಯಲ್ಲಿ ನೆರವೇರಿತು ಎಂದು ತಿಳಿದುಕೊಳ್ಳಲು ನಾವು ಬಯಸುತ್ತೇವೆ. ಆದರೆ ಮೊದಲಿಗೆ, ಒಬ್ಬ ಅಸಂಪೂರ್ಣನಾದ ವ್ಯಕ್ತಿಯು, ಕಳಂಕಿತ ಮನುಷ್ಯನು, ಆದಾಮನ ವಂಶದಲ್ಲಿ ಪಾರಂಪರ್ಯವಾಗಿ ಪಾಲುದಾರನಾಗಿರುವವನು, ಈ ರೀತಿಯಲ್ಲಿ ಆತನ ಜೀವಿತವು ನಮ್ಮ ಜೀವಿತದ ಭಾಗವಾಗಿರುವಾತನು, ನಮ್ಮ ವಿಮೋಚಕನಾಗಲು ಸಾಧ್ಯವಿಲ್ಲ ಎಂಬ ಸತ್ಯವು ನಮ್ಮ ಮನಸ್ಸಿನ ಮೇಲೆ ಪ್ರಭಾವಬೀರುವ ಅಗತ್ಯತೆಯನ್ನು ನೋಡ ಬಯಸುತ್ತೇವೆ. ದೇವರು ತನ್ನ ಮಗನನ್ನು ಇವರಲ್ಲಿ ಮತ್ತೊಬ್ಬನಾಗಿ ಕಳುಹಿಸಿ ಕೊಡದಿದ್ದರೂ, ಈ ಲೋಕದಲ್ಲಿ ಹೇರಳವಾಗಿ ಪಾಪಮಯರಾದ ಮಾನವರಿದ್ದರು. ಇಂಥಾಃ ಅಸಂಪೂರ್ಣವಾದ ಅನೇಕ ವ್ಯಕ್ತಿಗಳು ದೇವರ ಚಿತ್ತವನ್ನು ನೆರವೇರಿಸುವಂತೆ ತಮ್ಮ ಪ್ರಾಣಗಳನ್ನು ಅರ್ಪಿಸಲು ಸಿದ್ಧರಿದ್ದರು. ಇದನ್ನು ಇಬ್ರಿಯ 11ನೇ ಅಧ್ಯಾಯದಲ್ಲಿ ಪೂರ್ಣವಾಗಿ ದಾಖಲಿಸಲ್ಪಟ್ಟಿದೆ. ಇಲ್ಲಿ ಹೇಳಿರುವಂತೆ ಅನೇಕರು" ಕರ್ತನ ಬಗ್ಗೆ ತಮ್ಮ ನಿಷ್ಠೆಯ ಎದುರಿಗೆ ತನ್ನ ಪ್ರಾಣವು ತಮಗೆ ಪ್ರಿಯವೆಂದೆಣಿಸಲಿಲ್ಲ". ಆದರೆ, ಬೇಕಾದುದು ಪಾಪಕ್ಕಾಗಿ ಪ್ರಾಯಶ್ಚಿತ್ತಬಲಿ ಮಾತ್ರವಲ್ಲ, ಆದರೆ ಪಾಪರಹಿತವಾದ ಬಲಿ. ಇದು ಮಾತ್ರವೇ ಪಾಪಿಗಳ ದಂಡವನ್ನು ತೆರಲು ಸಾಧ್ಯ. ಆದರೆ **"ನೀತಿವಂತನು ಇಲ್ಲ, ಒಬ್ಬರಾದರೂ ಇಲ್ಲ"** (ರೋಮಾ. 3:10). **"ಎಲ್ಲರೂ ಪಾಪ ಮಾಡಿ ದೇವರ ಮಹಿಮೆಯನ್ನು ಹೊಂದದೇ ಹೋಗಿದ್ದಾರೆ"** (ರೋಮಾ. 3:23) **"ಯಾವನಾದರೂ ತನ್ನ ಸಹೋದರನು ಸಮಾಧಿಯಲ್ಲಿ ಸೇರದೆ ಶಾಶ್ವತವಾಗಿ ಬದುಕಿರುವುದಕ್ಕಾಗಿ ದೇವರಿಗೆ ಈಡನ್ನು ಕೊಟ್ಟು ಅವನ ಪ್ರಾಣವನ್ನು ಬಿಡಿಸಲಾರನು"** (ಕೀರ್ತನೆ 49:7,8). ದೇವರು ಈ ಲೋಕವನ್ನು ವಿಮೋಚಿಸಲು ಯಾರೊಬ್ಬ ಮನುಷ್ಯನಿಗೂ ಅರ್ಹತೆ ಇಲ್ಲ ಎಂದು ಕಂಡುಕೊಂಡು ಈ ದೆಸೆಯಲ್ಲಿ ಸಹಾಯ ಮಾಡಬಲ್ಲ ಒಬ್ಬಾತನನ್ನು ಕಂಡುಕೊಳ್ಳುತ್ತಾನೆ. ಆತನು ತನ್ನ ಮೂಲಕವಾಗಿ ತಂದೆಯ ಬಳಿಗೆ ಬರುವವರೆಲ್ಲರನ್ನೂ ರಕ್ಷಿಸ ಬಲ್ಲವನಾಗಿದ್ದಾನೆ – ಕೀರ್ತನೆ 89:19, ಯೆಶಾಯ 63:1;59:16: ಇಬ್ರಿಯ 7:25,26.

ಮುಂದೆ ನಾವು, ನಮ್ಮ ಕರ್ತನಾದ ಯೇಸುವು ಯಾವ ರೀತಿಯಲ್ಲಿ ನಮ್ಮ ಸಂತಾನದ ಮೇಲೆ ಹಿಡಿತ ಹೊಂದಿದ್ದನು ಮತ್ತು ತನ್ನ ತಾಯಿಯಾದ ಮರಿಯಳ ಮೂಲಕ, ಯಾವುದೇ ನೀತಿಭ್ರಷ್ಟತೆಗಾಗಲೀ, ಪಾಪದ ಯಾವುದೇ ಕೇಡನ್ನು ವಂಶಪಾರಂಪರ್ಯವಾಗಿ ಪಡಕೊಳ್ಳದೆ, ಅದರ ಮರಣವೆಂಬ ಶಾಪದ ಹಿಡಿತಕ್ಕೆ ಒಳಗಾಗದೆ ಯಾವ ರೀತಿಯಲ್ಲಿ ಅದರ ಸದಸ್ಯನಾದನು ಎಂಬುದನ್ನು ಸಾಧ್ಯವಾದರೆ ತಿಳಿದುಕೊಳ್ಳ ಬಯಸುತ್ತೇವೆ. ಆತನೂ ಯಾವುದೇ ಮಟ್ಟದಲ್ಲಿ ಅಥವಾ ರೀತಿಯಲ್ಲಿ ಆದಾಮನ ಜೀವಿತದಲ್ಲಿ ಭಾಗವಹಿಸಿದ್ದರೆ, ಆತನು ಆದಾಮನಿಗೆ ಉಂಟಾದ ಮರಣ ದಂಡನೆಯಲ್ಲೂ ಪಾಲುದಾರನಾಗ ಬೇಕಾಗುತ್ತಿತ್ತು. ಆ ರೀತಿಯಲ್ಲಿ ಆತನು ಅಸಂಪೂರ್ಣತೆಯಲ್ಲಿ ನಡೆಸಲ್ಪಟ್ಟಿದ್ದರೆ, ಮರಣ ದಂಡನೆಯ ವಶಕ್ಕೆ ಒಳಗಾಗಿರುವ ಆತನಿಗೆ ಈಡುಬಲಿಯ ಬೆಲೆಯನ್ನು ತೆರುವ, ಆ ಮೂಲಕ ತಂದೆಯಾದ ಆದಾಮನನ್ನೂ, ಆತನ ಸಂತಾನವನ್ನೂ ದೇವರ ನ್ಯಾಯದ ಫಲವಾಗಿ ವಿಧಿಸಲ್ಪಟ್ಟಿದ್ದ ಪಾಪದ ದಂಡನೆಯಿಂದ ಬಿಡಿಸುವ ಅಥವಾ ಕೊಂಡುಕೊಳ್ಳುವ ಜೀವವುಳ್ಳ ಹಕ್ಕುಬಾಧ್ಯತೆಗಳಿರುತ್ತಿರಲಿಲ್ಲ. ನಾವು ಈ ಪ್ರಶ್ನೆಯ ಬಗ್ಗೆ ಮುಂದಿನ ಅಧ್ಯಾಯದಲ್ಲಿ ಶೋಧಿಸುವಂತೆ ಪ್ರಸ್ತಾಪಿಸಲಿದ್ದೇವೆ. ನಾವು ಅದರಲ್ಲಿ ನಮ್ಮ ಕರ್ತನು ಯಾವ ರೀತಿಯಲ್ಲಿಯೂ ಅಥವಾ ಯಾವ ಮಟ್ಟದಲ್ಲಿಯೂ ಪಾಪದಿಂದ ಮಲಿನಗೊಳ್ಳಲಿಲ್ಲ ಅಥವಾ ತನ್ನ ತಾಯಿಯ ಮೂಲಕವಾಗಿ ಅಸಂಪೂರ್ಣನಾಗಿ ಕಂಡು ಬರಲಿಲ್ಲ ಎಂಬುದನ್ನು ರುಜುವಾತು ಪಡಿಸುವ ನಿರೀಕ್ಷೆಯಲ್ಲಿದ್ದೇವೆ.

* * * * * *